ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 10 ಸಂಚಿಕೆ 10-11 ಮಾರ್ಚ್ 13, 1988 ಬೆಲೆ 1.25ರೂ.

ರಾಜೀವ್ ಸರ್ಕಾರವನ್ನು ಕಿತ್ತೊಗೆಯಿರಿ

ಕಾಂ.ಇ.ಎಂ.ಎಸ್. ಕರೆ

ಜನವಿರೋಧಿ ರಾಜೀವ್‌ಗಾಂಧಿ ಸರ್ಕಾರವನ್ನು ಕಿತ್ತೊಗೆದುಪ್ರಜಾಸತ್ತಾತ್ಮಕಪ್ರಗತಿಪರ ಪರ್ಯಾಯ ಸರ್ಕಾರ ವೊಂದನ್ನು ಸ್ಥಾಪಿಸಲು ಸಿ.ಪಿ.ಐ(ಎಂ) ಪ್ರಧಾನಕಾರ್ಯದರ್ಶಿ ಕಾಂ॥ ಇ. ಎಂ. ಎಸ್. ನಂಬೂದ್ರಿಪಾದ್‌ರವರು ಜನತೆಗೆ ಕರೆ ನೀಡಿದ್ದಾರೆ. ಮಾರ್ಚ್ 15ರ ಭಾರತ್ ಬಂದ್ ಕರೆಯ ಅಂಗವಾಗಿ ಮಂಗಳವಾರ ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದ ಅವರು ಮುಕ್ತ ರೀತಿಯಲ್ಲಿ ಚುನಾವಣೆಗಳು ನಡೆದಲ್ಲಿ ಕಾಂಗ್ರೆಸ್(ಐ) ಸೋಲುವುದು ಖಚಿತವೆಂಬ ಭರವಸೆಯನ್ನು ವ್ಯಕ್ತಪಡಿಸಿದರು. ಕಾಂಗ್ರೆಸ್ (ಐ) ಸರ್ಕಾರವನ್ನು ಎಷ್ಟು ಬೇಗ ಅಧಿಕಾರದಿಂದಿಳಿಸಿದರೆ ದೇಶಕ್ಕೆ ಅಷ್ಟೇ ಕ್ಷೇಮ. ಆದರೆ ಈ ಹೋರಾಟ ಅಷ್ಟು ಸುಲಭವಲ್ಲ ಜನತೆಯ ಸಾಮೂಹಿಕ ಕಾರ್ಯಾಚರಣೆಯ ಮೂಲಕ ಮಾತ್ರ ಇದು ಸಾಧ್ಯ. ‘ಭಾರತ್ ಬಂದ್’ ಅಂತಹ ಆಂದೋಲನದ ಪ್ರಾರಂಭ ಮಾತ್ರವಾಗಿದ್ದು ಎಲ್ಲಾ ಜನ ವಿಭಾಗಗಳನ್ನು ಸಮರಧೀರ ಹೋರಾಟಗಳಿಗೆ ಅಣಿಗೊಳಿಸ ಬೇಕಾಗಿದೆ.

1984 ಡಿಸೆಂಬರ್ ಚುನಾವಣೆಯಲ್ಲಿ ರಾಷ್ಟ್ರೀಯ ಭಾವೈಕ್ಯತೆಯ ರಕ್ಷಣೆಯ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ರಾಜೀವ್ ಸರ್ಕಾರದ ಆಡಳಿತೆಯಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಟ್ಟದೆ. 1983ರಿಂದಲೂ ಕೆಲವು ತಿಂಗಳ ಅಕಾಲಿದಳ ಸರ್ಕಾರದ ಆಡಳಿತವನ್ನು ಬಿಟ್ಟರೆ ಪಂಜಾಬ್ ಸತತವಾಗಿ ಕೇಂದ್ರ ಆಡಳಿತೆಯಲ್ಲೇ ಮುಂದುವರಿಯುತ್ತಿದೆ. ಹಾಗಾದರೆ ಪಂಜಾಬ್ ಪರಿಸ್ಥಿತಿ ಹದಗೆಟ್ಟದ್ದರೆ ಅದಕ್ಕೆ ಕಾರಣರಾರು

(8ನೇ ಪುಟ ನೋಡಿ)

ಮುದ್ರಣಾಲಯದ ತೊಂದರೆಯಿಂದಾಗಿ ಮಾರ್ಚ್ 6,ರ ಸಂಚಿಕೆ ಪ್ರಕಟಗೊಳ್ಳಲಿಲ್ಲ. 10 ಪುಟಗಳೊಂದಿಗೆ ಈ ಸಂಚಿಕೆಯನ್ನು ಹೊರ ತರಲಾಗಿದೆ.

ವ್ಯವಸ್ಥಾಪಕರು

ಸರ್ಕಾರಿಯಾ ಕಮಿಶನ್ ವರದಿ

ಅತಿ ಕೇಂದ್ರೀಕರಣಕ್ಕೆ ವಿರೋಧ

ಕಾಂ.ಇ.ಎಂ.ಎಸ್.

ಕೇಂದ್ರ-ರಾಜ್ಯ ಸಂಬಂಧಗಳ ಕುರಿತಾಗಿ ರಚಿಸಿದ ಸರ್ಕಾರಿಯಾ ಆಯೋಗ ಎಲ್ಲವನ್ನೂ ವಿಷದವಾಗಿ ಪರಿಶೀಲಿಸಿದ್ದು 600-ಪುಟಗಳ ವರದಿ ಮಾಡಿಸಿದೆ. ಕಮೀಶನ್ ವರದಿಯ ಕೆಲವುಶಿಫಾರಸುಗಳನ್ನು ನಾವು ಒಪ್ಪಬಹುದು ಅಥವಾ ಒಪ್ಪದಿರಬಹುದು. ಆದರೆ ಕೇಂದ್ರ-ರಾಜ್ಯ ಸಂಬಂಧಗಳ ಈ ಸಮಸ್ಯೆಯನ್ನು ಬಗೆಹರಿಸಲು ವರದಿ ತೋರಿಸಿರುವ ಉತ್ಸಾಹ ಎಲ್ಲಾ ದೇಶಪ್ರೇಮಿಗಳಿಗೆ ಅನುಕರಣೀಯ. ರಾಜ್ಯಗಳ ಸ್ವಾಯತ್ತತೆಯನ್ನು ಬಲಿಗೊಡದ ರಾಷ್ಟ್ರೀಯ ಐಕ್ಯತೆಯನ್ನು ಕಾಪಾಡುವುದೇ ವರದಿಯ ಧೋರಣೆಯ ಸಾರ.

ಅಕ್ಟೋಬರ್ 1984 ರಷ್ಟು ಹಿಂದೆಯೇ ಬಿ.ಜೆ.ಪಿ. ಬಿಟ್ಟು ಎಲ್ಲಾ ವಿರೋಧ ಪಕ್ಷಗಳು ದೇಶದ ಸಮಗ್ರ ಬೆಳವಣಿಗೆಗೆ, ಕೇಂದ್ರ-ರಾಜ್ಯ ಸಂಬಂಧಗಳನ್ನು ಬದಲಾಯಿಸುವ ಪ್ರಶ್ನೆಯನ್ನು ಎತ್ತಿದ್ದವು. ದೇಶದ ಭದ್ರತೆಗೆ, ಆಂತರಿಕ ಮತ್ತು ಬಾಹ್ಯ ಶಕ್ತಿಗಳಿಂದ ಇರುವ ಅಪಾಯವನ್ನು ಎದುರಿಸಲು, ವಿವಿಧ ಭಾಷಾ ದೇಸಿ ಜನಾಂಗಗಳ ನಡುವೆ ಸಾಮರಸ್ಯ ತರುವ ಅಗತ್ಯದ ಬಗ್ಗೆ ಒತ್ತಿ ಹೇಳಿತ್ತು. ಇದಕ್ಕಾಗಿ ಕೇಂದ್ರ-ರಾಜ್ಯ ಸಂಬಂಧಗಳ ರಾಜಕೀಯ, ಆರ್ಥಿಕ ಮತ್ತು ಕಾನೂನು ಸಂವಿಧಾನಾತ್ಮಕ ಅಂಶಗಳಲ್ಲಿ ಬದಲಾವಣೆಯ ಅಗತ್ಯದ ಕಡೆ ಸಹ ಗಮನ ಸೆಳೆದಿತ್ತು. ಇಂತಹ ಹಿನ್ನೆಲೆಯಲ್ಲಿ ಸರ್ಕಾರಿಯಾ ಕಮಿಶನ್ ನೇಮಿಸಿದ್ದನ್ನು ವಿರೋಧ ಪಕ್ಷಗಳು ಸ್ವಾಗತಿಸಿದ್ದವು.

ಆದ್ದರಿಂದಲೇ ವರದಿಯು ಆರಂಭದಲ್ಲೇ ಸಮಸ್ಯೆಯನ್ನು ರಾಜಕೀಯವಾಗಿ ಎದುರಿಸಬೇಕು ಎಂದು ಒತ್ತಾಯಿಸಲಾಗಿದೆ. ಬರಿ ಕಾನೂನು, ಸಂವಿಧಾನಗಳ ಕಲಮುಗಳಲ್ಲೇ ಸಿಲುಕಿಕೊಳ್ಳದೆ ಸಂವಿಧಾನವನ್ನು ಅದು ತಯಾರಿಸಲ್ಪಟ್ಟ ಹಾಗೂ ಕಳೆದ 37 ವರ್ಷಗಳಲ್ಲಿ ಅದು ಕಾರ್ಯನಿರ್ವಹಿಸಿದ ಚಾರಿತ್ರಿಕ ಸನ್ನಿವೇಶದಲ್ಲಿ ಅದನ್ನು ನೋಡಬೇಕು ಎಂದಿದೆ ಸರ್ಕಾರಿಯಾ ವರದಿ.

ಕೇಂದ್ರ ಸರ್ಕಾರ ತನ್ನ ಪ್ರಬಲ ಶಾಸಕೀಯ ಅಧಿಕಾರದಿಂದಾಗಿ ರಾಜ್ಯಗಳಿಗೆ ಬಿಟ್ಟು ಕೊಟ್ಟ ಕೆಲಸಗಳನ್ನೂ ತಾನೇ ವಹಿಸಿಕೊಂಡಿದೆ.

1951ರ ಶಾಸನದ ಮೂಲಕ ಕೇಂದ್ರಸರ್ಕಾರ ಹಲವಾರು ಕೈಗಾರಿಕೆಗಳ ಮೇಲೆ ಹತೋಟಿ ಪಡೆದಿದೆ ಎಂದು ಗಮನಿಸಿರುವ ಆಯೋಗ ಯೋಜನಾ ಆಯೋಗದ ಮೂಲಕ ಕೇಂದ್ರೀಕೃತ ಯೋಜನೆ ಕಾರ್ಯಗಳಲ್ಲಿ ಹೇಗೆ ಕೇಂದ್ರ ಸರ್ಕಾರ ತನ್ನ ಪಾತ್ರವನ್ನು ವಿಸ್ತರಿಸಿಕೊಂಡಿದೆ ಎಂಬುದು ಉದಾಹರಣೆ ಎಂದಿದೆ. ಇದು ಸ್ವಾತಂತ್ರ್ಯದ ಸಮಯದಲ್ಲಿ ಕಾಂಗ್ರೆಸ್ ಎಲ್ಲಕ್ಕಿಂತಲೂ ಪ್ರಬಲ ಸ್ಥಾನ ಹೊಂದಿದ್ದರಿಂದ ಸಾಧ್ಯವಾಯಿತು ಎಂದು ಆಯೋಗ ಹೇಳಿದೆ. ರಾಜ್ಯಗಳು ಹಾಗೂ ಕೇಂದ್ರದ ನಡುವಿನ ಭಿನ್ನಾಭಿಪ್ರಾಯಗಳನ್ನು ಪಕ್ಷದ ಮಟ್ಟದಲ್ಲಿ ಪರಿಹರಿಸಿಕೊಳ್ಳಲಾಗುತ್ತಿತ್ತು. ಇದಕ್ಕೆ ತದ್ವಿರುದ್ಧವಾಗಿ ಕಳೆದ ನಾಲ್ಕು ದಶಕದ ಬೆಳವಣಿಗೆಗಳಿಂದ ಈ ರೀತಿ ಸುಮಾರಾಗಿ ಒಕ್ಕೂಟ, ಸ್ವರೂಪದಾಗಿದ್ದ ಸಂವಿಧಾನ “ಸ್ವರೂಪದಲ್ಲಷ್ಟೇ ಒಕ್ಕೂಟ, ಆದರೆ ವಾಸ್ತವವಾಗಿಏಕಘಟಕ”ವಾಗಿರುವುದು ವಿಪರೀತ ಕೇಂದ್ರೀಕರಣದ ವಿರುದ್ಧ ಗಮನಿಸಬೇಕಾದ ಒಂದುಅಂಶ.

ಇದರ ನಡುವೆ “ಉಪ-ರಾಷ್ಟ್ರೀಯ ಶಕ್ತಿಗಳು” ಆಂರಭದಲ್ಲಿ ಭಾಷಾ,ಧಾರ್ಮಿಕ ಗುಂಪುಗಳ ಆಧಾರದ ಮೇಲೆ ಆರಂಭವಾಗಿ ಆರ್ಥಿಕ ಪ್ರಶ್ನೆಗಳೂ ಸೇರಿಕೊಂಡು ಬಲಗಳಿಸಿಕೊಂಡಿವೆ ಎಂದೂ ಆಯೋಗ ಹೇಳುತ್ತದೆ. ಇದು ವಿಚ್ಛಿದ್ರಕಾರೀ ಪರಿಸ್ಥಿತಿಗೂ ಕಾರಣವಾಗಿದೆ ಎಂದು ಅದು ಗಮನಿಸಿದೆ.

ಒಂದೆಡೆ ಭಾಷಾವಾರು ಮರುಸಂಘಟನೆಯ ನಂತರ ರಾಜ್ಯಗಳು ಕೇವಲ ಆಡಳಿತ ಘಟಕಗಳು ಮಾತ್ರವೇ ಆಗಿಲ್ಲ, ಇನ್ನೊಂದೆಡೆ ಆಧುನಿಕ ಸಂಪರ್ಕ ಸಾಧನಗಳ ಹಾಗೂ ಕೈಗಾರಿಕೆಗಳ ಮೂಲಕ ಇಡೀ ಭಾರತ ಒಂದಾಗಿರುವುದು ಇವೆರಡರ ನಡುವೆ ಸಮನ್ವಯ ಸಾಧಿಸುವುದು ಅಗತ್ಯ ಎಂದಿರುವ ಆಯೋಗ ಆ ಬಗ್ಗೆ ವಿವರವಾದ ಶಿಫಾರಸು ಮಾಡಿದೆ.

ಮೊದಲನೆಯದಾಗಿ “ಸಂವಿಧಾನದ ಮೂಲಭೂತ ರಚನೆಯಲ್ಲಿ ತೀವ್ರ ಬದಲಾವಣೆಯ ಅಗತ್ಯವಿಲ್ಲ” ಎಂದು ಆಯೋಗ ಹೇಳಿದೆ. ಎರಡನೆಯದಾಗಿ ಸಂವಿಧಾನ ನಿಜವಾಗಿ ಆಚರಣೆಯಲ್ಲಿರುವ ರೀತಿಯಲ್ಲಿ ಬಹಳಷ್ಟು ಸುಧಾರಣೆ ಅಗತ್ಯ ಎಂದು ಆಯೋಗ ಹೇಳುತ್ತದೆ. ಉದಾಹರಣೆಗೆ, ರಾಜ್ಯ ಪಾಲರ ನೇಮಕ, ರಾಷ್ಟ್ರಪತಿಗೆ ನಿಯಮ ರೂಪಿಸುವ ಅಧಿಕಾರ, ಕೇಂದ್ರ ರಾಜ್ಯ ಹಾಗೂ ಸಮವರ್ತಿ ಪಟ್ಟಿಗಳಲ್ಲಿ ತಿದ್ದುಪಡಿ ಇತ್ಯಾದಿ.

ಇದಕ್ಕಿಂತಲೂ ಕೇಂದ್ರ-ರಾಜ್ಯ ವ್ಯವಸ್ಥೆಗಳ ಕಾರ್ಯ ನಿರ್ವಹಣೆಯ ಬಗ್ಗೆ ಆಯೋಗ ಇನ್ನೂ ಹೆಚ್ಚಿನ ಗಮನ ಸಹರಿಸಿದೆ. ಇವುಗಳಲ್ಲಿ ರಾಜ್ಯಪಾಲರ ಪಾತ್ರ, ರಾಜ್ಯಗಳ ಶಾಸನಗಳಿಗೆ ರಾಷ್ಟ್ರಪತಿ ಅಂಗೀಕಾರ, ಅಂತಂ-ಸರ್ಕಾರ ಸ್ಥಾಯಿ ಮಂಡಳಿ ರಚನೆ, ರಾಷ್ಟ್ರೀಯ ಆರ್ಥಿಕ ಹಾಗೂ ಅಭಿವೃದ್ಧಿ ಮಂಡಳಿ ರಚನೆ, ಯೋಜನೆಯಲ್ಲಿ ಜಿಲ್ಲಾ ಪರಿಷತ್ತು ಹಾಗೂ ಮುನಿಸಿಪಾಲಿಟಿಗಳ ಪಾತ್ರ ಮುಂತಾದ ಹಲವಾರು ಪ್ರಮುಖ ವಿಷಯಗಳ ಬಗ್ಗೆ ಅದು ಪರಿಶೀಲಿಸಿದೆ.

(IIನೇ ಪುಟ ನೋಡಿ)

ಕಪಟ ಆಯ-ವ್ಯಯ ಬಜೆಟ್

ಕಾಂ. ಪಿ. ರಾಮಚಂದ್ರರಾವ್

ಫೆಬ್ರವರಿ 29, 1988ರಂದು ಕೇಂದ್ರ ಸರ್ಕಾರದ ಆರ್ಥಿಕ ಮಂತ್ರಿ ಶ್ರೀಮಾನ್ ನಾರಾಯಣದತ್ ತಿವಾರಿಯವರು ತಮ್ಮ ಮೊಟ್ಟ ಮೊದಲಿನ ಬಜೆಟನ್ನು ಲೋಕ ಸಭೆಗೆ ಸಮರ್ಪಿಸಿ 125 ನಿಮಿಷಗಳ ಕಾಲ ಭಾಷಣವಿತ್ತರು. “ಕೇವಲ ರೂ. 615 ಕೋಟಿ ಮಾತ್ರ ಕರ ಬಾರ ಹಾಕುತ್ತಿದ್ದೇನೆ” ಎಂದು ನಗು ನಗುತ್ತಾ ತಿವಾರಿಯವರು ಹೇಳಿದರು.

ಬಜೆಟ್‌ನ ಪೂರ್ವದಲ್ಲಿಯೇ ಜನತೆಯ ಮೇಲೆ “ಆಡಳಿತ ದರಗಳನ್ನು (ಪೆಟ್ರೋಲ್, ಉಕ್ಕು, ಕಲ್ಲಿದ್ದಲು, ಆಹಾರಧಾನ್ಯಗಳ ದರ) ಹೆಚ್ಚಿಸಿ ರೂ. 1509 ಕೋಟಿಯನ್ನು “ರೈಲ್ವೇ ಮತ್ತು ಪೋಸ್ಟಲ್ ದರಗಳನ್ನು ಹೆಚ್ಚಿಸಿ ರೂ.1171 ಕೋಟಿಯನ್ನು” “ದೇಶದಲ್ಲಿಕ್ಷಾಮ” ಬಿದ್ದಿದೆ ಎಂದು ಹೇಳಿ 10 ಶೇಕಡಾ ಸರ್‌ಚಾರ್ಜು ಹಾಕಿ ರೂ. 1,000 ಕೋಟಿ ರೂ ಅಧಿಕ ಹಣ”ವನ್ನು ಬಗಲಿಗೆ ಹಾಕಿ, ಇದೀಗ ಕೇವಲ ರೂ. 615 ಕೋಟಿ ಮಾತ್ರ ಕರಭಾರ ಹಾಕಲಾಗಿದೆಯಷ್ಟೆ ಎನ್ನುವ ಬಜೆಟ್‌ನ್ನು ಮಂಡಿಸಿದ್ದನ್ನು ಕಪಟ ಬಜೆಟ್ ಎನ್ನದೆ ಬೇರೆನೆನ್ನಬೇಕು. ?

ಕಳೆದ ವರ್ಷ ಶ್ರೀಮಾನ್ ರಾಜೀವ್ ಗಾಂಧಿಯವರು ತಮ್ಮ ಪ್ರಥಮ (ಮತ್ತು ಕೊನೆಯ) ಬಜೆಟ್ ಸಮರ್ಪಿಸಿ “ನಾನು ಎಷ್ಟು

(8 ನೇ ಪುಟ ನೋಡಿ)

ಬೆಂಗಳೂರು ಸೊಳ್ಳೆಗಳ ನಗರವಾಗುವುದನ್ನು ತಪ್ಪಿಸಲು ಸಾಧ್ಯವೇ ?

ಒಂದು ರೀತಿಯಲ್ಲಿ ಹೇಳುವುದಾದರೆ ಬೆಂಗಳೂರು ಈಗಾಗಲೇ ಸೊಳ್ಳೆಗಳ ನಗರ. ಸೊಳ್ಳೆಗಳು ಮನುಷ್ಯರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇವೆ. ಬೆಂಗಳೂರಿನ ನಿಂತ ನೀರಿನ ಕೆರೆಗಳಿಂದ ಪ್ರತಿದಿನಕ್ಕೆ ಸುಮಾರು 25 ಕೋಟಿ, ಕಚ್ಚಾ ಚರಂಡಿಗಳಿಂದ ಸುಮಾರು 2 ಕೋಟಿ, "U" ಚರಂಡಿಗಳಿಂದ ಸುಮಾರು 13ಕೋಟಿ, ಖಾಲಿ ಸೈಟುಗಳಿಂದ ಸುಮಾರು 10ಕೋಟಿ ಸೊಳ್ಳೆಗಳು ಪ್ರತಿದಿನ ಹುಟ್ಟುತ್ತವೆ ಎಂದು ಬೆಂಗಳೂರಿನ ಸೊಳ್ಳೆ ಸಮಸ್ಯೆಯನ್ನು ಅಧ್ಯಯನ ಮಾಡಿದ ತಜ್ಞರ ಸಮಿತಿ ಅಂದಾಜು ಮಾಡಿದೆ. ಆದ್ದರಿಂದ ಬೆಂಗಳೂರು ಸೊಳ್ಳೆಗಳ ನಗರವಾಗಿ ಮುಂದುವರಿಯುವುದೇ ಇಲ್ಲವೇ ಎಂಬುದಷ್ಟೇ ಪ್ರಶ್ನೆ. ಸರ್ಕಾರಿ ಅಂಕೆ-ಸಂಖ್ಯೆಗಳ ಪ್ರಕಾರವೇ ಸೊಳ್ಳೆ ಸಾಂದ್ರತೆ 60ರ ದಶಕದ ಆರಂಭದಿಂದೀಚೆಗೆ ಹೆಚ್ಚಿದೆ. 1960-62 ರಲ್ಲಿ ಪ್ರತಿ-ಮನುಷ್ಯ-ಗಂಟೆಗೆ ಸೊಳ್ಳೆ ಸಾಂದ್ರತೆ 4 ಇದ್ದದ್ದು, 1980-81ರಲ್ಲಿ 21-9 ಕ್ಕೇರಿದೆ. ಈ ಸೊಳ್ಳೆಗಳ ಸಮಸ್ಯೆಯನ್ನು ಹತೋಟಿಗೆ ತರುವುದು ಸಾಧ್ಯವೆ ? ಸಾಧ್ಯ ಎನ್ನುತ್ತದೆ ತಜ್ಞರ ಸಮಿತಿ. ಇದಕ್ಕಾಗಿ ಒಂದು 'ಮಾಸ್ಟರ್‌ಪ್ಲಾನ್' ಸಹ ತಯಾರಿಸಿದೆ. ಹಾಗಾದರೆ ಬೇರೆ ಎಲ್ಲಾ ಯೋಜನೆಗಳಂತೆ ಹಣದ ಅಭಾವವೇ ? ಅಲ್ಲವೆನ್ನುತ್ತದೆ ತಜ್ಞರ ವರದಿ. ಈಗ ಸೊಳ್ಳೆ ನಿವಾರಣೆಗೆ ಖರ್ಚು ಮಾಡುತ್ತಿರುವಷ್ಟೇ ಹಣದಲ್ಲಿ ಇದು ಸಾಧ್ಯ ಎನ್ನುತ್ತಾರೆ. ಇದು ಬರಿ ತಜ್ಞರ 'ಪುಸ್ತಕದ ಬದನೆಕಾಯಿಯೇ? ಪಾಂಡಿಚೇರಿಯ ವೆಕ್ಟರ್ ಕಂಟ್ರೋಲ್ ರಿಸರ್ಚ್ ಸೆಂಟರ್‌ನ ನಿರ್ದೇಶಕ ಡಾ॥ಪಿ.ಕೆ.ರಾಜಗೋಪಾಲನ್‌ರ ನಾಯಕತ್ವದ ಈ ಸಮಿತಿ ಪಾಂಡಿಚೇರಿ ನಗರಕ್ಕೆ ತಯಾರಿಸಿದ 'ಮಾಸ್ಟರ್‌ಪ್ಲಾನ್' ಜಾರಿ ಮಾಡಿದಾಗ ಕೆಲವೇ ವರ್ಷಗಳಲ್ಲಿ ಸೊಳ್ಳೆ ಸಮಸ್ಯೆ ನಿವಾರಣೆಯಾಗಿದೆ. ಇದರಿಂದಾಗಿಯೇ ರಾಜ್ಯ ಸರ್ಕಾರ ಈ ತಜ್ಞರನ್ನು ಅಧ್ಯಯನಕ್ಕಾಗಿ ಆಹ್ವಾನಿಸಿತ್ತು.

ಬೆಂಗಳೂರಲ್ಲಿ ಸೊಳ್ಳೆ ನಿಯಂತ್ರಣ ಮಾಡಬೇಕಾದರೆ ಹಲವು ಸಂಸ್ಥೆಗಳು BDA, BWSSB, PWD, ಆರೋಗ್ಯ ಇಲಾಖೆ, NMEP (ರಾಷ್ಟ್ರೀಯ ಮಲೇರಿಯಾ ನಿವಾರಣಾ ಕಾರ್ಯಕ್ರಮ)NFCP (ರಾಷ್ಟ್ರೀಯ ಫೈಲೇರಿಯಾ ನಿಯಂತ್ರಣ ಕಾರ್ಯಕ್ರಮ) ಸಮನ್ವಯದಿಂದ ಯೋಜನಾಬದ್ಧವಾಗಿ ಕೆಲಸಮಾಡಬೇಕಾಗುತ್ತದೆ. ಈ ಯೋಜನೆ ವಿವರವಾದ ಸರ್ವೇ ಮೇಲೆ ಆಧಾರಿತವಾಗ ಬೇಕಾಗುತ್ತದೆ. ಇವ್ಯಾವುದು ಆಗುತ್ತಿಲ್ಲ ಎಂಬುದು ತಜ್ಞರ ಸಮಿತಿ ಅಧ್ಯಯನಕ್ಕೆ ಈ ಸಂಸ್ಥೆಗಳು ನೀಡಿದ ಅಸಹಕಾರದಿಂದ ಸ್ಪಷ್ಟವಾಗಿದೆ. ನಗರದಲ್ಲಿ ಸುಮಾರು 65.2 ಕೋಟಿ ಲೀಟರ್ ಪ್ರತಿದಿನಕ್ಕೆ ಕೊಚ್ಚೆ ನೀರು ಉತ್ಪಾದನೆಯಾಗುತ್ತಿದ್ದು, ಒಳ ಚರಂಡಿ ಮಂಡಲಿಗೆ ಇದನ್ನು ಶುದ್ಧೀಕರಿಸಲು ಇರುವ ಗರಿಷ್ಟ ಸಾಮರ್ಥ್ಯ 39.6 ಕೋಟಿ ಲೀಟರ್‌ಗಳಷ್ಟು. ಈ ಗರಿಷ್ಟ ಮಿತಿಯನ್ನು ಮಂಡಳಿಯಾವತ್ತೂ ಮುಟ್ಟುತ್ತಿಲ್ಲ. ಇದಕ್ಕೆ ಹಲವು ಕಾರಣಗಳಿವೆ. ವಿದ್ಯುತ್ ಶಕ್ತಿ ಅಭಾವ, ನಿರ್ವಹಣಾ ಸಮಸ್ಯೆಗಳು, ಅದಕ್ಷತೆ ಇತ್ಯಾದಿ. ಉಳಿದ ಕೊಚ್ಚೆ ನೀರನ್ನು ತೆರೆದ ಕೆರೆಗಳಿಗೆ ಬಿಡಲಾಗುತ್ತದೆ. ಇದೇ ರೀತಿ ಕಾರ್ಪೊರೇಷನ್ ಕಸಗಳನ್ನು ಪ್ರತಿದಿನ ಸಾಗಿಸುವುದು, ಸಾಗಿಸಿದ ಕಸದ ಸಂಸ್ಕರಣವಿಲ್ಲದೆ ವಿಲೇವಾರಿ ಮಾಡುವುದು, BDA, ಅದಕ್ಷತೆಯಿಂದಾಗಿ ಹುಚ್ಚುಹುಚ್ಚಾಗಿ ಯಾವುದೇ ಯೋಜನೆಯಿಲ್ಲದೆ ಬೆಳೆಯುತ್ತಿರುವನಗರದಲ್ಲಿಮನೆಯ ಸಮಸ್ಯೆ ತೀವ್ರವಾಗಿರುವುದರಿಂದ ಬೆಳೆಯುತ್ತಿರುವ ಯಾವುದೇ ಚರಂಡಿ ವ್ಯವಸ್ಥೆ ಇಲ್ಲದ ಕೊಳೆಗೇರಿಗಳು ಜನರಲ್ಲೂ, ಪರಿಸರ ನಿರ್ಮಲತೆಯ ಬಗ್ಗೆ ತಿಳುವಳಿಕೆ ಅಭಾವ ಇವೆಲ್ಲಾ ಸಮಸ್ಯೆಯನ್ನು ಉಲ್ಬಣಗೊಳಿಸಿವೆ. ಸೊಳ್ಳೆ ನಿವಾರಣೆ ಒಟ್ಟಾರೆ ಜವಾಬ್ದಾರಿ ಆರೋಗ್ಯ ಇಲಾಖೆಯದ್ದು ಕೆಲಸ. ಆದರೆ ಆರೋಗ್ಯ ಇಲಾಖೆಯ ಕೆಲಸ NMEP ಕಾರ್ಯಕ್ರಮದನ್ವಯ ಡಿ. ಡಿ. ಟಿ. ಹೊಡೆಯುವುದಕ್ಕೆ ಸೀಮಿತವಾಗಿದೆ. ಸೊಳ್ಳೆಯನ್ನು ನಿವಾರಿಸಲು ಅದರ ಮೂಲವನ್ನು ಗುರುತಿಸುವ ಅದರ ಅಭಿವೃದ್ಧಿಗೆ ಕಾರಣವಾದ ಅಂಶಗಳನ್ನು ನಿವಾರಿಸುವ ವಿವರವಾದ ಜ್ಞಾನದ ಅಭಾವ ಇಲಾಖೆಯಲ್ಲಿ ಕಂಡುಬರುತ್ತದೆ. ಅಷ್ಟೇ ಅಲ್ಲದೆ ಇದರ ಮೂಲಗಳನ್ನು ಗುರುತಿಸಿದಾಗಲೂ ಅದಕ್ಕೆ ತಕ್ಕ ಕ್ರಮಗಳನ್ನು ಕೈಗೊಳ್ಳುವ ಸಂಘಟನೆಯಾಗಲಿ ಸಂಪನ್ಮೂಲಗಳಾಗಲಿ ಇಲಾಖೆಯ ಬಳಿ ಇಲ್ಲ. ಇಂತಹದನ್ನು ಉಳ್ಳ ಇತರ ಸಂಘಟನೆಗಳು ಆರೋಗ್ಯ ಇಲಾಖೆಯ ಜತೆ ಸಮನ್ವಯದಿಂದ ಕೆಲಸ ಮಾಡುತ್ತಿಲ್ಲ.

ಆದ್ದರಿಂದ ಸೊಳ್ಳೆ ನಿಯಂತ್ರಣ ಕೆಲಸದ ಒಟ್ಟಾರೆ ಜವಾಬ್ದಾರಿಯನ್ನು ಕಾರ್ಪೊರೇಷನ್ ವಹಿಸಿಕೊಳ್ಳಬೇಕು. ಅದು ಸಂಬಂಧಪಟ್ಟ ಎಲ್ಲಾ ಸಂಘಟನೆಗಳ ಕೆಲಸವನ್ನು ಸಮನ್ವಯಗೊಳಿಸಲು ಕ್ಷೇತ್ರ ಕೆಲಸಗಾರರಿಗೆ (ಈಗಾಗಲೇ ಸುಮಾರು 776 ಜನರ ಸಿಬ್ಬಂದಿ ಇದೆ. ಇದು ಸಾಕು) ತಾಂತ್ರಿಕ ನಿರ್ದೇಶನ ನೋಡಲು 8ಜನ ಕೀಟ ವಿಜ್ಞಾನದಲ್ಲಿ ಪರಿಣಿತರನ್ನು ನೇಮಿಸಬೇಕು. ಇವರು ಸೊಳ್ಳೆ ಸಾಂದ್ರತೆಯ ಸರ್ವೇ ಇದರ ಮೂಲಗಳ ನಿರ್ಧಾರ, ಅವುಗಳ ನಿರ್ನಾಮ ಮುಂತಾದ ಕೆಲಸಗಳನ್ನು ವೈಜ್ಞಾನಿಕವಾಗಿ ವ್ಯವಸ್ಥಿತವಾಗಿ ನಿರ್ದೇಶಿಸಬಹುದು. ಇದರ ಜೊತೆಗೆ ಒಳ ಚರಂಡಿಗಳ ರಿಪೇರಿ, ಕೊಳಚೆ ನೀರಿನ ಶುದ್ಧೀಕರಣ, ಹೊಸ ಬಡಾವಣೆಗಳಲ್ಲಿ ಕೊಳಚೆ ನಿವಾರಣೆ ವ್ಯವಸ್ಥೆ ಮುಂತಾದ ಸಂಬಂಧ ಪಟ್ಟ ಕೆಲಸಗಳನ್ನು, ಆಯಾ ಸಂಸ್ಥೆಗಳಿಂದ ಮಾಡಿಸುವ ಸಮನ್ವಯದ ಕೆಲಸಗಳನ್ನು, ಕಾರ್ಪೊರೇಷನ್ ವಹಿಸಿಕೊಳ್ಳಬೇಕು. ಇದು ಸಮಿತಿಯ ಕೆಲವು ಸಲಹೆಗಳು. ವಿವರವಾದ ಸರ್ವೇಗಳನ್ನೊಳಗೊಂಡ 308 ಪುಟದ ವರದಿಯನ್ನು ಮಂಡಿಸಲಾಗಿದೆ. ಆದರೆ ಈ ತಜ್ಞರ ಸಮಿತಿಗೆ ಸಂಬಂಧ ಪಟ್ಟ ಸಂಘಟನೆಗಳೆಲ್ಲಾ ಮೊದಲಿನಿಂದಲೂ ಅಸಹಕಾರ ತೋರಿಸಿವೆ. ಈ ವರದಿಯನ್ನೂ ಹುಟ್ಟಿನಲ್ಲೇ ಕೊಲ್ಲುವ ಪ್ರಯತ್ನವನ್ನು ಮಾಡಿವೆ. ಬೆಂಗಳೂರು ಸೊಳ್ಳೆಗಳ ನಗರವಾಗುವುದನ್ನು ತಪ್ಪಿಸಬೇಕಾದರೆ, ಸಾರ್ವಜನಿಕರು ಈ ವರದಿಯ ಬಗ್ಗೆ ಸಾರ್ವಜನಿಕ ಚರ್ಚೆಯ ಮತ್ತು ಜಾರಿಯ ಬೇಡಿಕೆಯನ್ನು ಬಲವಾಗಿ ಮಂಡಿಸಬೇಕು.

ರಾಷ್ಟ್ರದಲ್ಲಿ ಸೊಳ್ಳೆಗಳ ನಿವಾರಣೆ

ಭಾರತದ ಹಲವು ನಗರಗಳಲ್ಲಿ, ಪಟ್ಟಣಗಳಲ್ಲಿ ಮಲೇರಿಯಾ ಪುನಃ ಕಾಣಿಸಿಕೊಂಡಿದೆ. 40ರ ದಶಕದಲ್ಲಿ DDT ಯ ಆವಿಷ್ಕಾರದ ನಂತರ, ಅದರ ಮೇಲೆ ಆಧಾರಿತ ಸೊಳ್ಳೆನಿವಾರಣಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಯಿತು. ಇದು ಸರ್ಕಾರಿ ಕಾರ್ಯಕ್ರಮವಾಗಿದ್ದು ಇದರಲ್ಲಿ ಯಾವುದೇ ರೀತಿಯಜನತೆ ಭಾಗವಹಿಸುವಿಕೆ ಇರಲ್ಲಿಲ್ಲ. ಆದರೂ ಒಂದು ಹಂತದಲ್ಲಿ ಮಲೇರಿಯಾವನ್ನು ನಿವಾರಿಸಲು ಹೆಚ್ಚು ಕಡಿಮೆ ಯಶಸ್ವಿಯಾಯಿತು. ಆದರೆ ಅದೇ ಕಾರ್ಯಕ್ರಮವನ್ನು ಕಣ್ಣು ಮುಚ್ಚಿಮುಂದುವರೆಸುತ್ತಿರುವುದು ಪರಿಣಾಮಕಾರಿಯಾಗುತ್ತಿಲ್ಲ ಎಂದು ಮಲೇರಿಯಾದ ಮರುಕಳಿಕೆಯಿಂದ ಸಿದ್ಧವಾಗಿದೆ.

ಇದಕ್ಕೆ ಸೊಳ್ಳೆಗಳ ಅಭಿವೃದ್ಧಿಗೆಪೂರಕವಾದ ಹಲವು ಬದಲಾವಣೆಗಳುಪರಿಸರ ವ್ಯವಸ್ಥೆಯಲ್ಲಿ ಆಗಿವೆ. ನೀರಿನಿಂದ ಆವೃತ್ತವಾದ ಭೂಪ್ರದೇಶದ ಹೆಚ್ಚಳ ಕೃಷಿಯಲ್ಲಿ ಬೇಕಾ ಬಿಟ್ಟಿ ಕೀಟನಾಶಕಗಳ ಬಳಕೆಯಿಂದ ರೋಗವಾಹಕ ಕ್ರಿಮಿಗಳು ಇವಕ್ಕೆಪ್ರತಿರೋಧಬೆಳೆಸಿಕೊಂಡಿರುವುದು, ಆಯೋಜಿತನಗರೀಕರಣದಿಂದ ಹುಟ್ಟಿರುವ ಕೊಳಗೇರಿಗಳಿಂದ ಕೊಚ್ಚೆ ನೀರು ಸಂಸ್ಕರಣದ ಸಮಸ್ಯೆ ಉಲ್ಬಣ ಗೊಂಡಿರುವುದು, ನಗರ ಯೋಜನೆಯಲ್ಲಿ ಸ್ವಾಭಾವಿಕ ಚರಂಡಿವ್ಯವಸ್ಥೆಯ ವಿಧಾನಗಳ ಬಗ್ಗೆ ಅಲಕ್ಷ್ಯ ಇತ್ಯಾದಿಗಳು ಸೊಳ್ಳೆ ಹುಟ್ಟುವಮೂಲಗಳನ್ನು ಹೆಚ್ಚಿಸಿದ್ದು ಸಮಸ್ಯೆಯನ್ನು ಉಲ್ಬಣಗೊಳಿಸಿವೆ. ಈ ಪರಿಸ್ಥಿತಿಗೆ ಸ್ಪಂದಿಸುವ ಸೊಳ್ಳೆ ನಿವಾರಣಾಯೋಜನೆಗಳನ್ನು ರೂಪಿಸಿಕೊಂಡಿಲ್ಲ. ಒಂದು ಕಾಲ ಹಂತದಲ್ಲಿ ತುರ್ತು ಕಾರ್ಯಕ್ರಮವಾಗಿದ್ದ MNEP, NFCP ಶಾಶ್ವತಸಂಘಟನೆಗಳಾಗಿ ಬಿಟ್ಟವೆ. ಈ ಕಾರ್ಯಕ್ರಮ ಪೂರ್ತಿಯಾಗಿ DDTಮೇಲೆ ಆಧಾರಿತವಾಗಿತ್ತು. ಸೊಳ್ಳೆ ನಿವಾರಣೆಗೆ ಬೇಕಾದ ಕ್ರೋಢಿಕೃತ ಕ್ರಮಗಳು ಈ ಯೋಜನೆಯಲ್ಲಿ ಸೇರಿರಲಿಲ್ಲ. ಸೇರಲೂ ಸಾಧ್ಯವಿರಲಿಲ್ಲ ಆದರೆ ಈ ಸಂಘಟನೆಗಳು ನಗರ ಪ್ರದೇಶಗಳಲ್ಲಿ ಇರುವುದರಿಂದ ಮುನಿಸಿಪಾಲಿಟಿಗಳು ಇವು ತಮ್ಮ ಸಮಸ್ಯೆಯಲ್ಲ ಎಂದು ಆರಾಮಾಗಿ ಇವೆ. ಸೊಳ್ಳೆ ನಿವಾರಣಾ ಕ್ರೋಢಿಕೃತ ಕ್ರಮಗಳನ್ನು ತೆಗೆದುಕೊಳ್ಳಲು ಇದು ಮಾರಕವಾದ ಸನ್ನಿವೇಶ. ಅದರಲ್ಲೂ ಭಾರತದ ಸುಮಾರು 3000ಪಟ್ಟಣಗಳಲ್ಲಿ122 ಪಟ್ಟಣಗಳು ಮಾತ್ರ ಈ ಕಾರ್ಯಕ್ರಮಕ್ಕೆ ಒಳಗಾಗಿವೆ. ಆದ್ದರಿಂದ ಸೊಳ್ಳೆಯ ಮೂಲವನ್ನು ಹುಡುಕಿ ಅದನ್ನು ಸಾಧ್ಯವಾಗಿಸುವ ಅಂಶಗಳನ್ನು ಹೋಗಲಾಡಿಸುವ ಮತ್ತು ಸೊಳ್ಳೆ-ಮೂಲಗಳಮೇಲೆ ಕೀಟನಾಶಕಗಳನ್ನು ಸಿಂಪಡಿಸುವ ಕ್ರೋಢಿಕೃತ ಕಾರ್ಯಕ್ರಮಗಳನ್ನು ಎಲ್ಲಾ ನಗರ ಪ್ರದೇಶಗಳಲ್ಲಿ ಮುನಿಸಿಪಾಲಿಟಿಯ ಉಸ್ತುವಾರಿಯಲ್ಲಿ ನಡೆಸಬೇಕು.

ಪಾಂಡಿಚೇರಿಯ ವೆಕ್ಟರ್ ಕಂಟ್ರೋಲ್ ರಿಸರ್ಚ್ ಸೆಂಟರ್ ಆದೇನಗರಕ್ಕಾಗಿ ರೂಪಿಸಿದ ಇಂತಹ ಯೋಜನೆ ಸಾಂಪ್ರದಾಯಿಕ ವಿಧಾನಕ್ಕಿಂತ ಹೆಚ್ಚು ಪರಿಣಾಮಕಾರಿ ಎಂದು ತೋರಿಸಿಕೊಟ್ಟಿದೆ. ಈ ಕಾರ್ಯಕ್ರಮ ಸೊಳ್ಳೆ ಸಾಂದ್ರತೆಯನ್ನು ಸಾಂಪ್ರದಾಯಕ ಕ್ರಮಗಳಿಗೆ ಹೋಲಿಸಿದರೆ ಮೂರನೇ ಒಂದುಭಾಗಕ್ಕೆ ಇಳಿಸಿದೆ. ಸೊಳ್ಳೆ-ಕಾರಣವಾದ ರೋಗಗಳನ ಅರ್ಧಕ್ಕಿಂತಲೂಕಡಿಮೆ ಪ್ರಮಾಣಕ್ಕೆ ಇಳಿಸಿದೆ. ಅಲ್ಲದೆ ಈಕಾರ್ಯಕ್ರಮದನ್ವಯಮಾಡಿದ ಪರಿಸರನೈರ್ಮಲ್ಯಕ್ರಮಗಳಿಂದಸುಮಾರು 68.5 ಲಕ್ಷರೂನ ಕೀಟನಾಶಕಗಳನ್ನು ಬಳಸಲಾಗಿದೆ. ಸೊಳ್ಳೆ ನಿವಾರಣಾ ಕಾರ್ಯಕ್ರಮಕ್ಕೆ ಕೊಡಲಾದ ಹಣವನ್ನೇ ಬೇರೆ ರೀತಿಯಲ್ಲಿ ಉಪಯೋಗಿಸಲಾಗಿದೆ. ವೆಚ್ಚ ಮಾಡಿ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿಸಲಾಗಿದೆ. ಸೊಳ್ಳೆ ನಿವಾರಣೆಯಲ್ಲಿ ವೈಜ್ಞಾನಿಕ ವಿಶ್ಲೇಷಣೆಯನ್ನು ಸೇರಿಸಲಾಗಿದೆ. ಸೊಳ್ಳೆ ನಿವಾರಣೆಯನ್ನು ಬರಿಯ ಕೀಟನಾಶಕದ ಸಮಸ್ಯೆಯಲ್ಲದೆ, ಒಂದು ಸಾಮಾಜಿಕ ಸಮಸ್ಯೆಯಾಗಿ ನೋಡಿ ತಕ್ಕ ಪರಿಹಾರ ರೂಪಿಸಲು ಪಯತ್ನಿಸಲಾಗಿದೆ. ಇದನ್ನು ಇತರ ಪಟ್ಟಣಗಳಿಗೆ ವಿಸ್ತರಿಸುವುದು ಸಾಧ್ಯವಾಗಬೇಕು.

ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಹೇಳಿಕೆ

ರಾಜ್ಯಪಾಲರ ನೇಮಕದಲ್ಲಿ ಪ್ರಜಾಪ್ರಭುತ್ವ ವಿರೋಧಿ ವಿಧಾನ

ಇತ್ತೀಚೆಗೆ ಆರು ರಾಜ್ಯಗಳ ರಾಜ್ಯಪಾಲರ ನೇಮಕ ಮಾಡಿದ ಪ್ರಜಾಪ್ರಭುತ್ವ-ವಿರೋಧಿ ರೀತಿಯನ್ನು ಸಿ.ಪಿ.ಐ.(ಎಂ) ನ ಪಾಲಿಟ್ ಬ್ಯೂರೋ ಖಂಡಿಸಿದೆ. ಕಾಂಗ್ರೆಸ್ (ಐ) ರಾಜ್ಯಪಾಲರ ಹುದ್ದೆಯನ್ನು ತನ್ನ ಸ್ವಾರ್ಥ ಸಾಧನೆಗೆ ಬಳಸುತ್ತಾ ಬಂದಿರುವ ಅನುಭವದ ಹಿನ್ನೆಲೆಯಲ್ಲಿ ಸರ್ಕಾರಿಯಾ ಆಯೋಗ ಕೇಂದ್ರದಲ್ಲಿನ ಆಳುವ ಪಕ್ಷದ ಯಾವುದೇ ಪದಾಧಿಕಾರಿ ಅಥವಾ ಸಕ್ರಿಯ ರಾಜಕೀಯ ಮುಖಂಡನನ್ನು ಬೇರೊಂದು ಪಕ್ಷದ ಆಳ್ವಿಕೆಯಿರುವ ರಾಜ್ಯಕ್ಕೆ ರಾಜ್ಯಪಾಲರನ್ನಾಗಿ ನೇಮಿಸಬಾರದೆಂದು ಶಿಫಾರಸು ಮಾಡಿತ್ತು.

ಆದರೆ ಈ ಶಿಫಾರಸಿಗೆ ತಾನು ಚಿಕ್ಕಾಸೂ ಬೆಲೆ ನೀಡುವುದಿಲ್ಲ ಎಂಬುದನ್ನು ಈ ಆರು ರಾಜ್ಯಪಾಲರ ನೇಮಕದ ಮೂಲಕ ಕೇಂದ್ರ ಸರ್ಕಾರ ಘೋಷಿಸಿದಂತಾಗಿದೆ ಎಂದು ಪಾಲಿಟ್ ಬ್ಯೂರೋ ಹೇಳಿದೆ. ಇತ್ತೀಚಿನವರೆಗೆ ಕೇಂದ್ರ ಮಂತ್ರಿ ಹಾಗೂ ಕಾಂಗ್ರೆಸ್ (ಐ)ನ ಸಕ್ರಿಯ ಕಾರ್ಯಕರ್ತೆಯನ್ನು ಎಲ್ಲಾ ಪ್ರಜಾಪ್ರಭುತ್ವ ನೀತಿಗಳನ್ನು ಗಾಳಿಗೆ ತೂರಿ ಕೇರಳದ ರಾಜ್ಯಪಾಲರನ್ನಾಗಿ ಮಾಡಲಾಗಿದೆ. ಬೇಹುಗಾರಿಕೆ ಸಂಘಟನೆಯ ನಿವೃತ್ತ ಮುಖಂಡರನ್ನು ಹರ್ಯಾಣದ ರಾಜ್ಯಪಾಲರನ್ನಾಗಿ ಮಾಡಿ ಅಪಾಯಕಾರೀ ಹೆಜ್ಜೆಯಿಡಲಾಗಿದೆ. ರಾಜ್ಯಪಾಲರ ಆಯ್ಕೆಯಲ್ಲಿ ಸಂಬಂಧಪಟ್ಟ ಮುಖ್ಯಮಂತ್ರಿಗಳೊಡನೆ ಚರ್ಚಿಸಲಾಯಿತೆಂಬ ಕೇಂದ್ರ ಗೃಹ ಮಂತ್ರಿಗಳ ಮಾತು ಅರ್ಥಹೀನ. ಯಾವ ಮುಖ್ಯ ಮಂತ್ರಿಯೊಡನೆಯೂ ಈ ಬಗ್ಗೆ ಪರಾಮರ್ಶೆ ನಡೆಸದೆ ರಾಜ್ಯಪಾಲರ ನೇಮಕದ ಸುದ್ದಿಯನ್ನು ಘೋಷಿಸುವ ಮೊದಲು ಅವರಿಗೆ ಟೆಲಿಫೋನ್ ಮೂಲಕ ತಿಳಿಸಲಾಯಿತಷ್ಟೆ.

ಆದ್ದರಿಂದ ಈ ರೀತಿ ಬಾರಿಬಾರಿಗೂ ಕಾಂಗ್ರೆಸ್ (ಐ) ಕೇಂದ್ರ-ರಾಜ್ಯ ಸಂಬಂಧಗಳನ್ನು ಉಲ್ಲಂಘಿಸುತ್ತಿರುವುದರ ವಿರುದ್ಧ ಪ್ರತಿಭಟಿಸಬೇಕೆಂದು ಹಾಗೂ ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಪ್ರಜಾಪ್ರಭುತ್ವ ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಒತ್ತಾಯಿಸಬೇಕೆಂದು ಪಾಲಿಟ್‌ಬ್ಯೂರೊ ಎಲ್ಲಾ ರಾಜಕೀಯ ಪಕ್ಷಗಳಲ್ಲಿ ಹಾಗೂ ನಾಗರೀಕರಲ್ಲಿ ಮನವಿಮಾಡಿ ಕೊಂಡಿವೆ

ಟರ್ಕಿ ಕಮ್ಯುನಿಸ್ಟ್ ಮುಂದಾಳು ಬಂಧನ ಖಂಡನೆ

ಹಲವಾರು ವರ್ಷಗಳ ಗಡಿಪಾರ ಜೀವನದ ನಂತರ ತಮ್ಮ ತಾಯ್ನಾಡಿಗೆ ಹಿಂತಿರುಗಿದ ಟರ್ಕಿಯ ಕಮ್ಯುನಿಸ್ಟ್ ಪಕ್ಷ ಮತ್ತು ಟರ್ಕಿಯ ಕಾರ್ಮಿಕ

(6 ನೇ ಪುಟ ನೋಡಿ)

ರಾಜ್ಯದೆಲ್ಲೆಡೆ ಭಾರತ್ ಬಚಾವೋ ದಿನಾಚರಣೆ

ಕುಂದಾಪುರ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಶಾಸ್ತ್ರೀ ಪಾರ್ಕಿನಲ್ಲಿ ಬೃಹತ್ ಸಾರ್ವಜನಿಕಸಭೆ ಜರುಗಿತು. ರೈತ ಸಂಘದ ಮುಂಖಡ ದಾಸ ಭಂಡಾರಿ ಅಧ್ಯಕ್ಷತೆ ವಹಿಸಿದ್ದರು.

ಹದಗೆಡುತ್ತಿರುವ ದೇಶದ ಆರ್ಥಿಕ ಪರಿಸ್ಥಿತಿ, ಹೆಚ್ಚುತ್ತಿರುವ ಛಿದ್ರಕಾರಿ ಭಯೋತ್ಪಾದಕ ಹಾವಳಿ, ಕಾರ್ಖಾನೆಗಳ ಮುಚ್ಚುವಿಕೆ, ಬೆಲೆ ಏರಿಕೆಯಿಂದ ಜನಸಾಮಾನ್ಯರನ್ನು ಮತ್ತಷ್ಟು ಸಂಕಷ್ಟಕ್ಕೆ ತಳ್ಳುವ ಜನತೆಯ ಸಮಸ್ಯೆ ಪರಿಹರಿಸುವಲ್ಲಿ ವಿಫಲಗೊಂಡಿರುವ ರಾಜೀವ್‌ಗಾಂಧಿಸರ್ಕಾರ ರಾಜೀನಾಮೆ ನೀಡಿ ಮರು ಚುನಾವಣೆ ನಡೆಸಲು ಒತ್ತಾಯಿಸಲಾಯಿತು. ಸಭೆಯನ್ನುದ್ದೇಶಿಸಿ ಕಾ॥ಸಿ.ನಾರಾಯಣ, ಕೆ.ವಿಶ್ವನಾಥ ಕೆ.ಶಂಕರ್, ಹಾಗೂ ಕಾ॥ಅಬ್ರಹಂಕರ್ಕಡರವರು ಮಾತನಾಡಿದರು.

ಫೆ.18 ರಂದು ಆಕಸ್ಮಿಕ ನಿಧನರಾದ ಪಕ್ಷದಸದಸ್ಯ ಹಾಗೂಕೆನರಾಟ್ರೇಡರ್ಸ್ ಕೆಲಸಗಾರರಾದ ಕಾ॥ಬಿ.ಸುಬ್ರಾಯ ಶೆಟ್ಟಿಗಾರರಿಗೆ ಎಸ್.ಕೆ.ಟೈಲ್‌ವರ್ಕರ್ಸ್ ಯೂನಿಯನ್, ಪಕ್ಷದ ಶಾಖೆ ಹಾಗೂ ತಾಲ್ಲೋಕು ಸಮಿತಿಸಂತಾಪಸೂಚಿಸಿದೆ.

ಉಡುಪಿ

ತಹಸೀಲ್ದಾರ್ ಕಛೇರಿ ವೃತ್ತದಿಂದ ಹೊರಟ ರೈತ-ಕಾರ್ಮಿಕ, ವಿದ್ಯಾರ್ಥಿ-ಯುವಜನರ ಬೃಹತ್ ಮೆರವಣಿಗೆ ನಗರಸಭೆ ಬಳಿ ಮುಕ್ತಾಯಗೊಂಡು ಬಹಿರಂಗ ಸಭೆಯನ್ನು ನಡೆಸಿತು. ಶಂಕರಶೆಟ್ಟಿಗಾರ ಸ್ವಾಗತಿಸಿ ಜೆ.ಎಸ್.ಭಟ್ಟ್‌ರವರು ಅಧ್ಯಕ್ಷತೆ ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಸಿ.ಪಿ ಐ.ನ ಜಿಲ್ಲಾ ಕಾರ್ಯದರ್ಶಿ ಬಿ.ಕೆ.ಕೃಷ್ಣಪ್ಪ, ಸಿ.ಪಿ.ಐ.(ಎಂ) ತಾಲೋಕು ಕಾರ್ಯದರ್ಶಿ ಕಾ॥ಡೇವಿಡ್ ಎ.ಕರ್ಕಡರವರು ಮಾತನಾಡಿ ದುಡಿಯುವ ಜನತೆಯ ಒಗ್ಗಟ್ಟನ್ನು ಬಲಪಡಿಸಿ ಎಡ ಮತ್ತು ಜಾತ್ಯಾತೀತ ಪಕ್ಷಗಳ ಐಕ್ಯವನ್ನು ಸಾಧಿಸಿ ಕಾಂಗ್ರೆಗೆ ಬದಲಿ ಶಕ್ತಿಯಾಗಿ ಬೆಳೆಸುವ ದಿಶೆಯಲ್ಲಿ ರಾಜೀವ್‌ಗಾಂಧಿ ಸರ್ಕಾರದರಾಜೀನಾಮೆಗಾಗಿ ಜನತೆಯ ಹೋರಾಟ ಅನಿವಾರ್ಯವೆಂದು ಹೇಳಿ ಮಾರ್ಚ್ 15 ರ ಭಾರತ್‌ಬಂದ್ ಯಶಸ್ವಿಗೊಳಿಸಲು ಕರೆ ನೀಡಿದರು.

ತಾಲೋಕಿನ ವಿವಿಧ ಸಂಘಟನೆಗಳಾದ ಬ್ಯಾಂಕ್, ಎಲ್.ಐ.ಸಿ, ಸಿ.ಐಟಿ.ಯು, ರೈತ ಸಂಘ, ಡಿ.ವೈ.ಎಫ್.ಐ, ಎಸ್.ಎಫ್.ಐ. ಹಾಗೂ ವಿವಿಧ ಕಾರ್ಮಿಕ ಸಂಘಟನೆಗಳು ಬಂದ್‌ಗೆ ಬೆಂಬಲಿಸಿವೆ.

ಗುಲ್ಬರ್ಗಾ

ರಾಜೀವ್‌ಹಠಾವ್ ದೇಶಬಚಾವೋ ರಾಜೀವ್‌ಗಾಂಧಿ ರಾಜೀನಾಮೆ ಕೊಡಿ ಮಧ್ಯಾಂತರ ಚುನಾವಣೆ ನಡೆಸಿ ಮುಂತಾದ ಘೋಷಣೆಗಳನ್ನು ಕೂಗುತ್ತಾ ಸಹಸ್ರ ಜನ ರೈತ-ಕಾರ್ಮಿಕ, ವಿಧ್ಯಾರ್ಥಿ ಯುವಜನರ ರ‍್ಯಾಲಿ ಗುಲ್ಬರ್ಗಾದ ತಿಮ್ಮಾಪುರಿ ಚೌಕ, ಸ್ಟೇಷನ್‌ಬಜಾರ್ ಮೂಲಕ ನೆಹರು ಗಂಜ್‌ನಲ್ಲಿ ಮುಕ್ತಾಯಗೊಂಡು ಬಹಿರಂಗ ಸಭೆ ನಡೆಸಲಾಯಿತು.

ಸಿ.ಪಿ ಐ.(ಎಂ), ಸಿ.ಪಿ.ಐ. ಜನತಾ ಲೋಕದಳ (ಎ) ಪಕ್ಷಗಳು ಗುಲ್ಬರ್ಗಾದಲ್ಲಿ ಜಂಟಿಯಾಗಿ ನಡೆಸಿದ ಫೆ.23ರ ಭಾರತ ಬಚಾವೋ ದಿನಾಚರಣೆ ಬಹಿರಂಗ ಸಭೆಯ'ಲ್ಲಿ ಜನತಾ ಪಕ್ಷದ ಜಿಲ್ಲಾ ಅಧ್ಯಕ್ಷ ಚನ್ನಬಸಪ್ಪ ಕುಳಗೇರಿ ಅಧ್ಯಕ್ಷತೆವಹಿಸಿದ್ದರು. ಸಿ.ಪಿ.ಐ.(ಎಂ) ಪಕ್ಷದ ಜಿಲ್ಲಾಕಾರ್ಯದರ್ಶಿ ಕಾ॥ಕಲ್ಲಪ್ಪ ಕಿರಣಗಿ, ಸಿ.ಪಿ.ಐ.ನ ಅಡೆವಪ್ಪನವರು, ಶಾಸಕ ಹಣವಂತ ರಾವದೇಸಾಯಿ ವಿಶ್ವನಾಥಪಾಟೀಲ್, ಲೋಕದಳ(ಎ) ಪಕ್ಷದ ಈರಣ್ಣಾ ತಿಮ್ಮಾಜಿಯವರುಗಳು ಬಹಿರಂಗಸಭೆಯನ್ನುದ್ದೇಶಿಸಿ ಮಾತನಾಡಿದರು. ದೇಶವನ್ನುಛಿದ್ರಗೊಳಿಸುವ ಜಾತಿವಾದಿ-ಕೋಮುವಾದಿ ಶಕ್ತಿಗಳೊಂದಿಗೆ ಸೇರಿ ದೇಶದ ಐಕ್ಯತೆ ಎತ್ತಿಹಿಡಿಯುವಲ್ಲಿ ವಿಫಲವಾಗಿರುವ ರಾಜೀವ್‌ಗಾಂಧಿ ಸರ್ಕಾರದ ರಾಜಿನಾಮೆ ಒತ್ತಾಯಿಸಿ ಮಾರ್ಚ್ 15ರ ಭಾರತ ಬಂದ್ ಯಶಸ್ವಿಗೊಳಿಸಲು ಎಲ್ಲ ಭಾಷಣಕಾರರು ಕರೆನೀಡಿದರು.

ಚಿತ್ರದುರ್ಗ

ಹರಿಹರ : ಎಡ-ಪ್ರಜಾಪ್ರಭುತ್ವವಾದಿ ಜಾತ್ಯಾತೀತ ಪಕ್ಷಗಳ ಕರೆಯಂತೆ ಹರಿಹರದಲ್ಲಿ ಜನತಾ, ಸಿ.ಪಿ.ಐ.(ಎಂ) ಸಿ.ಪಿ.ಐ. ಪಕ್ಷಗಳ ಜಂಟಿ ಬಹಿರಂಗ ಸಭೆ ನಡೆಸಲಾಯಿತು. ಜನತಾ ಪಕ್ಷದ ಶಾಸಕ ಬಿ.ಜಿ.ಕೊಟ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಸಿ.ಪಿ ಐ.(ಎಂ)ನ ನಿತ್ಯಾನಂದಸ್ವಾಮಿ, ಸಿ.ಪಿ.ಐ.ನ ಕೆ.ಜಿ.ಕರಿಸಿದ್ದಪ್ಪ ದೇಶದ ತೀವ್ರ ಆರ್ಥಿಕ-ಸಮಾಜಿಕ ಬಿಕ್ಕಟ್ಟಿಗೆ ಕಾರಣವಾದ ರಾಜೀವ್‌ಗಾಂಧಿಸರ್ಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು. ಕೊನೆಯಲ್ಲಿ ಆರ್.ಬಿ. ಅಂಗಡಿಯವರು ಮಾತನಾಡಿ 'ಬಂದ್' ಯಶಸ್ವಿಗೊಳಿಸಲು ಮನವಿ ಮಾಡಿದರು.

ರಾಣೆಬೆನ್ನೂರುಃ

ತಾಲೋಕು ಜನತಾ ಪಕ್ಷದ ಕೃಷ್ಣಮೂರ್ತಿ ಸುಣಗಾರರ ಅಧ್ಯಕ್ಷತೆಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಸಿ.ಪಿ.ಐ.ನ ಬಿ.ಎನ್.ಹೇಮಣ್ಣ, ಸಿ.ಪಿ.ಐ.(ಎಂ) ಪಕ್ಷದ ನಿತ್ಯಾನಂದ ಸ್ವಾಮಿ ಮತ್ತು ಎಸ್.ಎಫ್.ಕ್ಯಾದಗಿಯವರುಗಳು ಮಾತನಾಡಿ ಎಲ್ಲಾ ರಂಗಗಳಲ್ಲಿವಿಫಲವಾಗಿರುವ ರಾಜೀವ್‌ಗಾಂಧಿ ಸರ್ಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿದರು.

ತುಮಕೂರು

ಸಿ. ಪಿ. ಐ. (ಎಂ), ಜನತಾ, ಸಿ. ಪಿ. ಐ. ಪಕ್ಷಗಳು ಜಂಟಿಯಾಗಿ ತುಮಕೂರಿನ ಅಶೋಕನಗರದಲ್ಲಿ ಸಾವಿತ್ರಮ್ಮ ಕಲ್ಯಾಣ ಮಂಟಪದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಸಿ. ಪಿ. ಐ.(ಎಂ)ಜಿಲ್ಲಾ ಕಾರ್ಯದರ್ಶಿ ಕಾ॥ ಹೆಚ್. ಸಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ವ್ಯಾಪಾರೋದ್ಯಮಿಶ್ರೀಸಿದ್ದಲಿಂಗಶೆಟ್ಟಿ, ಮಾಜಿಶಾಸಕ ವಿ.ಎಂ,ದೇವ್ ನಿವೃತ್ತ, ಪ್ರಾಧ್ಯಾಪಕ ಮರಿದೇವರು, ಸಿ.ಪಿ. ಐ. ಜಿಲ್ಲಾ ಕಾರ್ಯದರ್ಶಿ ಎನ್. ಶಿವಣ್ಣ ಪತ್ರಕರ್ತರಾದ ಶ್ರೀ ವೆಂಕಟರಾಮಯ್ಯನವರುಗಳು ಮಾತನಾಡಿದರು.

ರಾಜೀವ್ ದುರಾಡಳಿತ ಕೊನೆ ಗೊಳಿಸಲು ಮಧ್ಯಾಂತರ ಚುನಾವಣೆಗೆ ಒತ್ತಾಯಿಸಲು ಕರೆನೀಡಿರುವ 'ಭಾರತ್ ಬಂದ್' ಯಶಸ್ವಿಗೆ ಜಿಲ್ಲೆಯ ಜನ ವಿಭಾಗವೂ ಸಂಪೂರ್ಣ ಸಹಕಾರ ನೀಡಬೇಕೆಂದು ಭಾಷಣಕಾರರು ಮನವಿ ಮಾಡಿದರು.

ಶಿವಮೊಗ್ಗ

ಭದ್ರಾವತಿ :

ಭದ್ರಾವತಿಯ ರಂಗಪ್ಪ ಸರ್ಕಲ್‌ನಲ್ಲಿ ಸಿ.ಪಿ.ಐ.(ಎಂ) ಸಿ.ಪಿ.ಐ. ಜಂಟಿಯಾಗಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು.

ಸಿ. ಪಿ. ಐ .ನ ಕಾ॥ ಡಿ. ಸಿ. ಮಾಯಣ್ಣ ಹಾಗೂ ಸಿ. ಪಿ. ಐ. (ಎಂ) ಪಕ್ಷದ ಕಾ॥ ರಂಗೇಗೌಡ, ನರಸಿಂಹಯ್ಯ ಮತ್ತು ಬಸವರಾಜ್‌ರವರುಗಳು ಮಾತನಾಡಿ ದೇಶವನ್ನು ವಿನಾಶದೆಡೆಗೆ ಕೊಂಡೊಯ್ಯುತ್ತಿರುವರಾಜೀವ್ ಗಾಂಧಿ ರಾಜೀನಾಮೆ ನೀಡಲು ಒತ್ತಾಯಿಸಿದರು. ಮಾರ್ಚ್ 15ರ ಭಾರತ್ ಬಂದ್ ಯಶಸ್ವಿಗೊಳಿಸಲು ಕರೆ ನೀಡಿದರು.

ಬಂದ್‌ಗೆ ಸಿ.ಐ.ಟಿ.ಯು ಬೆಂಬಲ

ದೇಶದ ಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳು ನೀಡಿರುವ 'ಮಾರ್ಚ್ 15ರ ಭಾರತ್ ಬಂದ್' ಗೆ ಬೆಂಬಲ ವ್ಯಕ್ತಪಡಿಸಿ ಯಶಸ್ವಿಗೊಳಿಸಲು ಫೆ. 13ರಂದು ದೆಹಲಿಯಲ್ಲಿ ಸಭೆ ಸೇರಿದ ಸಿ.ಐ.ಟಿ.ಯು,ಎ.ಐ ಟಿ.ಯು.ಸಿ. ಹೆಚ್.ಎಂ..ಎಸ್, ಟಿ.ಯು.ಸಿ.ಸಿ, ಯು.ಟಿ.ಯು.ಸಿ, ಯು.ಟಿ.ಯು.ಸಿ, (ಲೆನಿನ್ ಸರಣಿ) ನೀಡಿದ ಕರೆಯಂತೆ ಕರ್ನಾಟಕ ರಾಜ್ಯ ಸಿ.ಐ.ಟಿ.ಯು. ಕಾರ್ಯದರ್ಶಿ ಮಂಡಳಿ ಸಭೆ ಸೇರಿ ರಾಜ್ಯದ ಎಲ್ಲಾ ಸಿ.ಐ.ಟಿ.ಯು.ಗೆ ಸೇರಿದ ಕಾರ್ಮಿಕ ಸಂಘಗಳು ರಾಷ್ಟ್ರೀಯ ಒಕ್ಕೂಟಗಳು, ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರದ ನೌಕರರ ಸಂಘಗಳು, ಬ್ಯಾಂಕ್ ಮತ್ತು ವಿಮಾ ಸಂಘಗಳು ಬಂದ್‌ಗೆ ಬೆಂಬಲಿಸಬೇಕೆಂದು ಮನವಿ ಮಾಡಿದೆ.

1987ರ ಡಿಸೆಂಬರ್ 23ರ ಕುಂದಾಪುರದ ರಾಜ್ಯ ಸಮಿತಿ ಕೈಗೊಂಡ ನಿರ್ಣಯದಂತೆ ಮಾರ್ಚ್ 15ರಂದು ಇಡೀ ಕಾರ್ಮಿಕ ವರ್ಗ ಅಂದು ಕೆಲಸನಿಲ್ಲಿಸಿ ಮುಷ್ಕರ, ಬಂದ್ ಯಶಸ್ವಿಗೊಳಿಸಬೇಕೆಂದು ಕರೆ ನೀಡಿದೆ. ಭಾರತ್ ಬಂದ್‌ನ 14 ಅಂಶಗಳ ಬೇಡಿಕೆಗಳನ್ನು ಕಾರ್ಮಿಕ ವರ್ಗದ ಮಧ್ಯೆ ಜನ ಪ್ರಿಯಗೊಳಿಸಲು, ರಾಜೀವ್ ಗಾಂಧಿ ರಾಜೀನಾಮೆ ಕೊಟ್ಟು ಚುನಾವಣೆ ನಡೆಸಬೇಕೆಂದು ಒತ್ತಾಯಿಸಲು ಕಾರ್ಮಿಕರು-ಸಾರ್ವಜನಿಕರ ಮಧ್ಯೆ ವ್ಯಾಪಕ ಪ್ರಚಾರ ಕರಪತ್ರ ವಿತರಿಸಿ ಗೇಟ್ ಮೀಟಿಂಗ್-ಸಾರ್ವಜನಿಕ ಸಭೆಗಳನ್ನು ಸಂಘಟಿಸುವಂತಹ ಎಲ್ಲಾ ಕಾರ್ಯವನ್ನು ಕೈಗೊಂಡು ಬಂದ್ ಸಂಪೂರ್ಣ ಯಶಸ್ವಿಗೊಳಿಸಲು ಕರೆ ನೀಡಿದೆ.

FORM IV

(See Rule 8)

1.	Place of Publication	:	BANGALORE
2.	Periodicity of its Publication	:	WEEKLY
3.	Printer's Name	:	P. RAMACHANDRA RAO
	Whether citizen of India ?	:	YES
	Address	:	L-56, K.V. Temple Street, Sultanpet, Bangalore-53.
4.	Publisher's Name	;	P. RAMACHANDRA RAO
	Whether citizen of India ?	;	YES
	Address	:	L-56 K.V. Temple Street, Sultanpet, Bangalore-53.
5.	Editor's Name	:	P. RAMACHANDRA RAO
	Whether citizen of India ?	:	YES
	Address	:	L-56 K.V. Temple Street, Sultanpet, Bangalore-53.
	Name and address of individuals who own the News Paper and Partners or Share holders holding more than one percent of the total capital.		Communist Party of India (Marxist) Karnataka State Committee, K.V. Temple Street, Sultanpet, B'lore-53

I, P.RAMACHANDRA RAO hereby declare that the perticulers given above are true to the best of my knowledge and belief.

13-3-1988

P. RAMACHANDRA RAO
Signature of Publisher

"ಪೀಪಲ್ಸ್ ಡೆಮಾಕ್ರಸಿ" ಪತ್ರಿಕೆಯ ಸಂಪಾದಕೀಯ

ಹೋರಾಟ ನಿರತ ತ್ರಿಪುರಾ ಜನತೆಗೆ ನೆರವಾಗೋಣ

ತ್ರಿಪುರಾದಲ್ಲಿ ಜನತೆಯ ವಿರುದ್ಧ ಅತ್ಯಾಚಾರ ನಡೆಸುತ್ತಿರುವವರ ಸುಳ್ಳು ಹೇಳಿಕೆಗಳು, ಪ್ರಚಾರಗಳ ನಡುವೆ ವಿಕೃತಗೊಂಡ ಚುನಾವಣೆಯ ನಂತರ ಹತ್ಯಾಕಾರೀ ಕೃತ್ಯಗಳು ಪ್ರತಿ ದಿನ ನಡೆಯುತ್ತಿವೆ. ವಾಸ್ತವವಾಗಿ ಇದು ಚುನಾವಣೆಯ ಮೊದಲು, ತ್ರಿಪುರಾವನ್ನು ಪ್ರಕ್ಷುಬ್ಧ ಪ್ರದೇಶವೆಂದು ಘೋಷಿಸುವ ಮೊದಲು ಸಿ.ಪಿ.ಐ.(ಎಂ) ಹಾಗೂ ಇತರ ಎಡ ಶಕ್ತಿಗಳ ಮೇಲೆ ನಡೆಸಿದ ಹತ್ಯಾಕಾರೀ ಹಲ್ಲೆಗಳ ಮುಂದುವರಿಕೆಯೇ. ಸಾಲಾಗಿ ಪಕ್ಷದ ಸದಸ್ಯರುಗಳ ಕೊಲೆ ನಡೆದವು. ಇದನ್ನು ಟಿ.ಎನ್.ವಿ. ಗೂಂಡಾಗಳು ನಡೆಸಿದರೆನ್ನಲಾಗುತ್ತಿದೆ. ಇದರಲ್ಲಿ ಕೇಂದ್ರದ 'ರಾ' ಗುಪ್ತಚರ ಸಂಸ್ಥೆ, ಮತ್ತಿತರ ಇಂತಹ ಸಂಘಟನೆಗಳ ಕೈವಾಡವೂ ಇರಬಹುದೆಂದು ಈಗ ಶಂಕೆಯಿದೆ. ಅರೆಸೈನಿಕ ಪಡೆಗಳ ಕೃಪಾ ಛತ್ರದಡಿ ಈಗ ಕೆಂಬಾವುಟಗಳನ್ನು ಸುಡಲಾಗುತ್ತಿದೆ, ಪಕ್ಷದ ಕಚೇರಿಗಳ ಮೇಲೆ, ಎಡರಂಗ ಬೆಂಬಲಿಗರ ಮೇಲೆ ಮುಖ್ಯವಾಗಿ ಸಿ.ಪಿ.ಐ.(ಎಂ) ಬೆಂಬಲಿಗರ ಮೇಲೆ ಹಲ್ಲೆ ನಡೆಯುತ್ತಿವೆ.

ಚುನಾವಣಾ ನಂತರದ ಈ ಭಯೋತ್ಪಾದಕ ಕೃತ್ಯಗಳನ್ನು, ಗಲಭೆಗಳನ್ನು ಅಡೆತಡೆಯಿಲ್ಲದೆ ನಡೆಸುವುದೇ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶವೆಂದು ಸಾರಿದ್ದರ ಉದ್ದೇಶವೆಂಬುದು ಈಗ ಸ್ಪಷ್ಟ.

ಕಾಂಗ್ರೆಸ್ (ಐ) ವಿಜಯದ ನಂತರ ಬಾಡಿಗೆ ಗೂಂಡಾಗಳು ಹಾಗೂ ನೀತಿಗೆಟ್ಟ ಕಾಂಗ್ರೆಸ್ಸಿಗರ ಅಧಿಕೃತ ಭಯೋತ್ಪಾದನೆಗೆ ಪೂರಕವಾಗಿ ಕಾಂಗ್ರೆಸ್ (ಐ) ಮಂತ್ರಿಮಂಡಲ ನೇರ ಅಧಿಕೃತ ಭಯೋತ್ಪಾದನೆ ಆರಂಭಿಸಿದೆ. ಮನೆಗಳಿಗೆ ಕಾನೂನುಬಾಹಿರ ದಾಳಿ, ವಾರಂಟಿಲ್ಲದೆ ಬಂಧನ, ಟಿ.ಎನ್.ವಿ. ಯೊಂದಿಗೆ ಪಿತೂರಿಯ ಸುಳ್ಳು ಆಪಾದನೆಗಳು ಮುಂತಾದ ಎಲ್ಲಾ ಫ್ಯಾಸಿಸ್ಟ್ ವಿಧಾನಗಳು, ಜೊತೆಗೆ ದಿನೇ ದಿನೇ ಕರ್ಕಶಗೊಳ್ಳುತ್ತಿರುವ ಹಿಟ್ಲರ್ ಮಾದರಿಯ ಅಪಪ್ರಚಾರ.

ಸಹಜವಾಗಿಯೇ, ಪ್ರಜಾತಾಂತ್ರಿಕ ಸಂಸ್ಥೆಗಳು, ವರ್ಗ ಸಂಘಟನೆಗಳು ಇದಕ್ಕೆ ಮೊದಲ ಬಲಿ. ರಾಜಧಾನಿಯ ನಗರಸಭೆಯೂ ಸೇರಿದಂತೆ ಎಲ್ಲಾ ಚುನಾಯಿತ ಸ್ಥಳೀಯ ಸಂಸ್ಥೆಗಳನ್ನು ರದ್ದುಗೊಳಿಸಲಾಗಿದೆ. ಬೇರೆಡೆ ಕಾಂಗ್ರೆಸ್(ಐ) ಪಂಚಾಯತಿರಾಜ್ಯದ ಬಗ್ಗೆ ಮಾತನಾಡುತ್ತಿದೆ. ಆದರೆ ಇಲ್ಲಿ ಬಹಿರಂಗವಾಗಿಯೇ ಅಧಿಕಾರಶಾಹೀ ರಾಜ್ಯದ ಘೋಷಣೆ ಮಾಡುತ್ತಿದೆ. ಕಾಂಗ್ರೆಸ್ (ಐ) ನ್ನು ಅಧಿಕಾರದಲ್ಲಿಡಲು ಬೇರು ಮಟ್ಟದ ಪ್ರಜಾತಂತ್ರದ ಹತ್ಯೆ ಮಾಡಲಾಗುತ್ತಿದೆ.

ಜರ್ಮನಿಯಲ್ಲಿ ಸಂಸತ್ ಭವನಕ್ಕೆ (ರೈಖ್ ಸ್ಟಾಗ್) ಬೆಂಕಿ ಹಾಕಿ ನಾಝಿಗಳು ದಿಮಿತ್ರೊವ್ ಹಾಗೂ ಇತರ ಕಮ್ಯುನಿಸ್ಟರ ಮೇಲೆ ಆದರ ಆಪಾದನೆ ಹೊರಿಸಿದಂತೆ ತ್ರಿಪುರಾದಲ್ಲಿ ಸಿ.ಪಿ.ಐ. (ಎಂ) ಶಾಸಕರು, ವಿಧಾನ ಸಭಾ ಚುನಾವಣೆಯ ಅಭ್ಯರ್ಥಿಗಳಾಗಿದ್ದವರು ಹಾಗೂ ರಾಜ್ಯ ಸರ್ಕಾರೀ ನೌಕರರ ಸಂಘಟನೆಯ ಕಾರ್ಯಕರ್ತರ ಮೇಲೆ ಟಿ.ಎನ್.ವಿ. ಯೊಂದಿಗೆ ಸಹಕರಿಸುವ ಆಪಾದನೆಯೂ ಸೇರಿದಂತೆ ಇನ್ನೂ ಹಲವು ರೀತಿಯ ಸುಳ್ಳು ಮೊಕದ್ದಮೆಗಳನ್ನು ಹೇರಿ ಬಂಧಿಸಲಾಗುತ್ತಿದೆ! ರಾಜ್ಯ ಸರ್ಕಾರೀ ನೌಕರರ ಸಂಘದ ಕಚೇರಿಗಳ ಮೇಲೆ ಕಾಂಗ್ರೆಸ್ (ಐ) ಸರ್ಕಾರ ಗೂಂಡಾ ದಾಳಿ ನಡೆಸುತ್ತಿದೆ. ಸಾಲದಕ್ಕೆ ರಾಜೀವ್‌ಗಾಂಧಿಯ ಕುಲೀನ ಹಿಂಬಾಲಕರು ಮಾವೋ, ಎಂಗೆಲ್ಸ್, ಲೆನಿನ್, ಸ್ಟಾಲಿನ್, ರವೀಂದ್ರನಾಥ್, ನಝ್ರುಲ್ ಹಾಗೂ ಸುಕಾಂತೋರವರ ಭಾವಚಿತ್ರಗಳನ್ನು, ಮಾರ್ಕ್ಸ್‌ವಾದೀ ಸಾಹಿತ್ಯದ ಜೊತೆಗೆ ಸುಡುತ್ತಿದ್ದಾರೆ!

ಇದಕ್ಕಾಗಿಯೇ ಅವರು ಸೇನೆ ಹಾಗೂ ಅರೆಸೈನಿಕ ಪಡೆಗಳ ನೆರವಿನಿಂದ ಚುನಾವಣೆ ಗೆದ್ದಿರುವುದು. ನ್ಯಾಯವಾದ ರೀತಿಯಲ್ಲಿ ಚುನಾವಣೆ ಗೆದ್ದ ಯಾವುದೇ ಬೂರ್ಜ್ವಾ ಪಕ್ಷ ಕೂಡಾ ಉದಾರತೆಯ ಉದಾರ ರಿಯಾಯಿತಿಗಳ ತೋರಿಕೆಯೊಂದಿಗೆ, ಕನಿಷ್ಟ ಪ್ರಜಾತಂತ್ರದ ತೋರಿಕೆಯೊಂದಿಗಾದರೂ ತನ್ನ ಆಡಳಿತ ಆರಂಭಿಸುತ್ತದೆ. ಆದರೆ ತಾನು ಬಹುಸಂಖ್ಯಾತ ಜನತೆಯನ್ನು ವಂಚಿಸಿ, ಸ್ನಾಯುಬಲ ಪ್ರದರ್ಶಿಸಿ, ಸಮಾಜ ವಿರೋಧಿ ಶಕ್ತಿಗಳ ಹೇಡಿ ಆಕ್ರಮಣಗಳ ಮೂಲಕ ಅಧಿಕಾರ ಕಸಿದುಕೊಂಡಿದ್ದೇನೆಂದು ತಿಳಿದಿರುವ ಪಕ್ಷ ಸದಾ ಜನತೆಯ ಭಯದ ನೆರಳಲ್ಲೇ ಕಂಪಿಸುತ್ತದೆ. ಆದ್ದರಿಂದಲೇ ಪ್ರಜಾಸತ್ತಾತ್ಮಕ ವಿಜಯಗಳಿಸಿದ್ದೇನೆಂದು ಬಡಬಡಿಸುತ್ತಾ ಹತ್ಯಾಕಾರಿಹಿಂಸಾಚಾರ ಹರಿಯಬಿಟ್ಟು ತಾನು ಭದ್ರ ಎಂದು ಭ್ರಮಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

ಈ ಭಯೋತ್ಪಾದನೆಯೇ ಕಾಂಗ್ರೆಸ್ (ಐ) ನ ಗೆಲುವಿನ ತುಚ್ಛತೆಯನ್ನು ಬಯಲಿಗೆಳೆದಿದೆ. ತನಗೆ ಮತ ನೀಡಲು ನಿರಾಕರಿಸಿದ 50 ಶೇಕಡಾಕ್ಕೂ ಹೆಚ್ಚಿನ ಸಿ.ಪಿ.ಐ.(ಎಂ) ಬಹುಮತದ ಭಯ ಕಾಂಗ್ರೆಸ್(ಐ)ಗೆ, ಇಲ್ಲವಾದರೆ ಈ ವ್ಯಾಪಕ ಸರ್ಕಾರೀ ಹಿಂಸಾಚಾರದ ಪ್ರದರ್ಶನವೇಕೆ?

ಟಿ.ಎನ್.ವಿ. ಸವಾಲು ಬರುತ್ತಿರುವುದು ರಾಜ್ಯದ ಹೊರಗಿನಿಂದ, ಆದರೆ ಕಾಂಗ್ರೆಸ್ (ಐ) ರಾಜ್ಯದ ಒಳಗೆ ಜನತೆಯ ಮೇಲೆ ಆಕ್ರಮಣ ನಡೆಸುತ್ತಿದೆ, ಅದೂ ಟಿ.ಎನ್.ವಿ.ಯ ಮಿತ್ರ ಟಿ.ಯು.ಜೆ.ಎಸ್. ನ್ನು ಮಂತ್ರಿಮಂಡಲದ ಗೌರವಾರ್ಥ ಸದಸ್ಯನನ್ನಾಗಿ ಇಟ್ಟುಕೊಂಡೇ! ಖಾಲಿಸ್ತಾನಿಗಳಿಗೆ ತಮ್ಮೆಲ್ಲಾ ಭಯೋತ್ಪಾದಕತೆಯನ್ನು, ನೀತಿ ಹೀನತೆಯನ್ನು ಬಳಸಿದರೂ ಪಂಜಾಬಿನಿಂದ ವ್ಯಾಪಕ ವಲಸೆ ಹೋಗುವಂತೆ ಮಾಡಲಾಗಲಿಲ್ಲ. ಆದರೆ ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ದಕ್ಷತೆ, ಬೆಂಬಲಕ್ಕಿರುವ ಸರ್ಕಾರಿ ಯಂತ್ರ ಅದನ್ನು ಸಾಧಿಸಿ ಬಿಟ್ಟಿದೆ. ನೂರಾರು ಜನ ಆಶ್ರಯ ಹುಡುಕಿ ಹೋಗುತ್ತಿದ್ದಾರೆ, ಗಡಿದಾಟಿ ಪಶ್ಚಿಮ ಬಂಗಾಳಕ್ಕೆ ಹೋಗುತ್ತಿದ್ದಾರೆ.

ಜನರನ್ನು ಭಯಭೀತಿಗೊಳಿಸುವುದು ಮಾತ್ರವಲ್ಲ, ಹತ್ತು ವರ್ಷಗಳ ಎಡರಂಗಆಳ್ವಿಕೆಯಲ್ಲಿ ಬುಡಕಟ್ಟು ಜನತೆ, ಹರಿಜನರು ಮಣಿಪುರಿಗಳುಮುಂತಾದ ದುರ್ಬಲ ವಿಭಾಗಗಳು ಪಡೆದ ಸೌಲಭ್ಯಗಳಿಂದ ಅವರನ್ನು ವಂಚಿಸುವುದು ಕೂಡಾ ಕಾಂಗ್ರೆಸ್ (ಐ)ನ ಉದ್ದೇಶ. ಸಾಮೂಹಿಕ ಪ್ರದರ್ಶನಗಳಲ್ಲಿ ಹಾಗೂ ಟ್ರೇಡ್ ಯೂನಿಯನ್ ವಿವಾದಗಳಲ್ಲಿ ಪೋಲೀಸ್ ಮಧ್ಯಪ್ರವೇಶ ಮತ್ತೆ ಆರಂಭವಾಗಿದೆ. ಎಡರಂಗ ಸರ್ಕಾರದಿಂದಾಗಿ ಐಕ್ಯತೆಯ ಆಗರವಾಗಿದ್ದ ಈ ರಾಜ್ಯದಲ್ಲೂ ಪ್ರತ್ಯೇಕತಾವಾದೀ ಭಾವನೆ ಹರಡಲು ಫಲವತ್ತಾದ ಭೂಮಿ ಒದಗಿಸಿ ಬೇರೆಡೆಯಂತೆ ಇಲ್ಲೂ ಕಾಂಗ್ರೆಸ್ (ಐ) ರಾಷ್ಟ್ರೀಯ ಐಕ್ಯತೆಯನ್ನು ಭಂಗಗೊಳಿಸುವ ಸಾಧನವಾಗುತ್ತಿದೆ.

(6 ನೇ ಪುಟನೋಡಿ)

ತ್ರಿಪುರಾ ಸೌಹಾರ್ದ ನಿಧಿ

ವಿಧಾನ ಸಭಾ ಚುನಾವಣೆಯ, ಪ್ರಕ್ಷುಬ್ಧ ಪ್ರದೇಶವೆಂದು ಘೋಷಣೆಯಾದ ನಂತರ ತ್ರಿಪುರಾದಲ್ಲಿ ಪರಿಸ್ಥಿತಿ ಗಂಭೀರವಾಗಿದೆ. ಎಲ್ಲಾ ವಿರೋಧ ಪಕ್ಷಗಳ ಚಟುವಟಿಕೆಗಳನ್ನು ದಮನ ಮಾಡಲು ಕಾಂಗ್ರೆಸ್ (ಐ) ಸರ್ಕಾರ ಪ್ರಸಿದ್ಧ ಎನ್.ಎಸ್.ಎ. ಬಳಸಲು ನಿರ್ಧರಿಸಿದೆ.

ಈ ಕಷ್ಟದ ಪರಿಸ್ಥಿತಿಯನ್ನು ಎದುರಿಸಲು, ತ್ರಿಪುರಾದಲ್ಲಿ ಪಕ್ಷವನ್ನು ಬೆಂಬಲಿಸಲು ತುರ್ತಾಗಿ ನಿಧಿ ಸಂಗ್ರಹಿಸುವುದು ಅಗತ್ಯ. ಆದ್ದರಿಂದ "ತ್ರಿಪುರಾ ಸೌಹಾರ್ದ ನಿಧಿ"ಗೆ ತಕ್ಷಣ ಹಣಸಂಗ್ರಹಿಸಬೇಕೆಂದು ಪಾಲಿಟ್ ಬ್ಯೂರೋ ಪಕ್ಷದ ಎಲ್ಲಾ ಘಟಕಗಳಿಗೆ ಹಾಗೂ ಬೆಂಬಲಿಗರಿಗೆ ಕರೆ ನೀಡಿದೆ. ಇದನ್ನು ತ್ರಿಪುರಾದಲ್ಲಿ ಕಾಂಗ್ರೆಸ್ (ಐ) ನ ಸರ್ವಾಧಿಕಾರಿ ಹಾಗೂ ಜನ ತಂತ್ರ ವಿರೋಧಿ ಹಲ್ಲೆಗಳನ್ನು ಬಯಲಿಗೆಳೆಯಲು ಬಳಸಬೇಕೆಂದು ಪಾಲಿಟ್ ಬ್ಯೂರೋ ಹೇಳಿದೆ.

ಫ್ಯಾಸಿಸ್ಟ್ ಮಾದರಿ

"ಅಸೆಂಬ್ಲಿ ಚುನಾವಣೆಗಳಲ್ಲಿನ ಅಭ್ಯರ್ಥಿಗಳು ಹಾಗೂ ಚುನಾಯಿತ ಶಾಸಕರೂ ಸೇರಿದಂತೆ ನೂರಾರು ಸಂಗಾತಿಗಳನ್ನು ಸುಳ್ಳು ಮೊಕದ್ದಮೆಗಳಲ್ಲಿ ಸಿಲುಕಿಸಲಾಗಿದೆ. ಇನ್ನಷ್ಟು ಮನೆಗಳ ಮೇಲೆ ದಾಳಿ, ತಪಾಸಣೆ, ಬಂಧನಗಳು ನಡೆಯಲಿವೆ. ನೂರಾರು ಸಂಗಾತಿಗಳು ತಮ್ಮ ಮನೆಗಳನ್ನು ಬಿಟ್ಟು ಬೇರೆಡೆ ಆಶ್ರಯ ಹುಡುಕಿ ಹೋಗುತ್ತಿದ್ದಾರೆ ಫೆಬ್ರವರಿ 14ರಂದು ಅಗರ್ತಲಾದಲ್ಲಿ ನಡೆದ ರ್‍ಯಾಲಿ ಕೆಂಬಾವುಟದಡಿಯಲ್ಲಿ ಸಮರಧೀರ ಜನತೆಯ ಮೊದಲ ಪ್ರತಿಕ್ರಿಯೆ. ಇಂತಹ ಇನ್ನಷ್ಟು ಸಮರಧೀರ ರ್‍ಯಾಲಿಗಳು ನಡೆಯಲಿವೆ.

—ಇ.ಎಂ.ಎಸ್.ಗೆ ನೃಪೇನ್ ಚಕ್ರವರ್ತಿಯವರ ಪತ್ರದಿಂದ

ತ್ರಿಪುರಾದಲ್ಲಿ ಪ್ರಜಾತಂತ್ರ ತುಳಿಯಲಾಗುತ್ತಿದೆ: ಎಡ ಎಂ.ಪಿ.ಗಳ ನಿಯೋಗ

ತ್ರಿಪುರಾದಲ್ಲಿ ಟಿ.ಎನ್.ವಿ. ಭಯೋತ್ಪಾದಕರಿಂದ ಅಥವಾ ಕೇಂದ್ರದಲ್ಲಿ ಆಳುವ ಪಕ್ಷದ ಏಜೆಂಟರಿಂದ ಸಾಮೂಹಿಕ ಹತ್ಯಾಕಾಂಡ ಕೆಲವು ಘಟನೆಗಳನ್ನು ನಡೆಸಿ ಚುನಾವಣೆಯ ಸ್ವಲ್ಪವೇ ಮೊದಲು ತ್ರಿಪುರಾವನ್ನು ಪ್ರಕ್ಷುಬ್ಧ ಪ್ರದೇಶವೆಂದು ಘೋಷಿಸಿ ಸೇನೆ ಕಳುಹಿಸುವ ಆಳವಾದ ಪಿತೂರಿ ನಡೆಸಲಾಗಿತ್ತೆಂದು ನಂಬಲು ಈಗ ಸಾಕಷ್ಟು ಕಾರಣಗಳಿವೆ. ಇದರಲ್ಲಿ ಕೇಂದ್ರದ ರಾಜಕೀಯ ಗುಪ್ತಚರ ಪಡೆ 'ರಾ' ದ ಕೈವಾಡ ವಿದ್ದ ಸಾಧ್ಯತೆಯೂ ಇದೆ ಎಂದು ಫೆಬ್ರವರಿ 14 ಹಾಗೂ 15ರಂದು ತ್ರಿಪುರಾದ ಪ್ರವಾಸ ನಡೆಸಿ ಎಡ ಪಕ್ಷಗಳ ಎಂ.ಪಿ.ಗಳ ನಿಯೋಗವೊಂದು ಅಭಿಪ್ರಾಯ ಪಟ್ಟಿದೆ.

ಸಿ.ಪಿ.ಐ. (ಎಂ) ನ ದಿಪೇನ್ ಘೋಷ ಹಾಗೂ ಎಂ.ಎ. ಬೇಬಿ, ಆರ್.ಎಸ್.ಪಿ.ಯ ತ್ರಿದಿಬ್ ಚೌಧುರಿ, ಫಾರ್ವರ್ಡ್ ಬ್ಲಾಕ್‌ನ ಚಿತ್ತ ಬಸು ಹಾಗೂ ಸಿ.ಪಿ.ಐ.ನ ಗುರುದಾಸ್ ದಾಸ್ ಗುಪ್ತಾ ಸದಸ್ಯರಾಗಿದ್ದ ಈ ನಿಯೋಗ ಚುನಾವಣೆಗಳ ಮೊದಲು ಹಾಗೂ ನಂತರ ಗಲಭೆ ನಡೆದ ಪ್ರದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿ ಚುನಾವಣಾ ಪ್ರಕ್ರಿಯೆಯನ್ನು ನಿರೂಪಗೊಳಿಸಿದ ಹಾಗೂ ಅಮಾಯಕ ಜನತೆಯ ಮೇಲೆ ಅತ್ಯಾಚಾರ ವೆಸಗಿದ ಬಗ್ಗೆ ಮಾಹಿತಿಗಳನ್ನು ಪುರಾವೆಗಳನ್ನು ಸಂಗ್ರಹಿಸಿ ಈ ಅಭಿಪ್ರಾಯಕ್ಕೆ ಬಂದಿದೆ.

ಚುನಾವಣೆಯ ಪ್ರಚಾರದ ಕಾಲದಲ್ಲಿ ಹಾಗೂ ಚುನಾವಣೆಯ ನಂತರವೂ ತ್ರಿಪುರಾದಲ್ಲಿದ್ದ ಕೇಂದ್ರಮಂತ್ರಿಗಳ ವರ್ತನೆ ಚುನಾವಣಾ ನಿಯಮಾವಳಿಗಳ ತೀವ್ರ ಉಲ್ಲಂಘನೆಯೆಂಬುದಕ್ಕೆ ಪೂರ್ಣ ಪುರಾವೆ ಈ ನಿಯೋಗಕ್ಕೆ ದೊರೆತಿದೆ. ಮುಖ್ಯ ಚುನಾವಣಾ ಕಮಿಶನರರ ಆಜ್ಞೆಗಳನ್ನು ಉಲ್ಲಂಘಿಸಿ ವಿದ್ಯುಕ್ತವಾಗಿ ಚುನಾವಣಾ ಫಲಿತಾಂಶ ಘೋಷಿಸಿದ ನಂತರವೂ ಮರು ಎಣಿಕೆ ನಡೆಸುವಂತೆ ಈ ಮಂತ್ರಿಗಳು ಚುನಾವಣಾ ಅಧಿಕಾರಿಗಳ ಮೇಲೆ ಒತ್ತಡ ಹೇರಿದರು. ತ್ರಿಪುರಾದ ಮುಖ್ಯ ಚುನಾವಣಾಧಿಕಾರಿಯ ವರ್ತನೆಯೂ ಸಂಶಯಾತೀತವೇನೂ ಆಗಿರಲಿಲ್ಲ.

ಹೀಗೆ ಚುನಾವಣಾ ಫಲಿತಾಂಶವನ್ನೇ ವಿರೂಪಗೊಳಿಸಿ ಅಧಿಕಾರ ಕಸಿದುಕೊಂಡ ಮೇಲೆ ಎಡರಂಗ ಪಕ್ಷಗಳ ಕಾರ್ಯಕರ್ತರುಹಾಗೂ ಹಿತೈಷಿಗಳ ವಿರುದ್ಧ ಕಾಂಗ್ರೆಸ್(ಐ) ಗೂಂಡಾಗಳ ಭಯೋತ್ಪಾದಕ ಕೃತ್ಯಗಳು ಅವ್ಯಾಹತವಾಗಿ ನಡೆಯಲಾರಂಭಿಸಿದವು. ಟಿ.ಎನ್.ವಿ ಭಯೋತ್ಪಾದಕರ ವಿರುದ್ಧ ಕಾರ್ಯಾಚರಣೆಗೆಂದು ಕರೆಸಲ್ಪಟ್ಟ ಅರೆಸೈನಿಕ ಪಡೆಗಳು ಇದರಲ್ಲಿ ಕಾಂಗ್ರೆ ಗೂಂಡಾಗಳಿಗೆ ಪೂರ್ಣ ನೆರವು ನೀಡುತ್ತಿವೆ ಎಂದು ದೂರುನೀಡಿದರೂ ಕಾನೂನು ಪಾಲಕ ಅಧಿಕಾರಿಗಳಿಂದ ಏನೊಂದೂ ನೆರವು ಸಿಗಲಿಲ್ಲವೆಂದು ಗಲಭೆ ಪೀಡಿತ ಪ್ರದೇಶಗಳ ಜನ ಎಂ.ಪಿ.ಗಳ ನಿಯೋಗಕ್ಕೆ ತಿಳಿಸಿದರು. ಕೇಂದ್ರ ಕೈಗಾರಿಕಾ ಭದ್ರತಾ ಪಡೆ ಕಾಂಗ್ರೆ ಗೂಂಡಾಗಳ ಹಲ್ಲೆಗೊಳಗಾದ ಮಹಿಳೆಯರಿಗೆ ಆಶ್ರಯ ನೀಡಲು ನಿರಾಕರಿಸಿದರು!

"ಚುನಾವಣಾ ಫಲಿತಾಂಶ ಪ್ರಕಟವಾದ ಕೂಡಲೇ ಐದು ಸಿ.ಪಿ.ಐ.(ಎಂ) ಕಾರ್ಯಕರ್ತರನ್ನು ಕೊಲ್ಲಲಾಯಿತು. ಹಲವಾರು ಮಂದಿಯನ್ನು ಗಾಯಗೊಳಿಸಿದರು. ಮನೆಗಳನ್ನು ಸುಟ್ಟರು. ಮಹಿಳೆಯರ ಮೇಲೂ ಆಕ್ರಮಣ

(6 ನೇ ಪುಟ ನೋಡಿ)

ತ್ರಿಪುರಾದಲ್ಲಿ ನಾವು ಸೋತಿಲ್ಲ ಸೋಲನ್ನು ಹೇರಲಾಗಿದೆ

ಕಾಂಗ್ರೆಸ್-ಟಿಯುಜೆಎಸ್ ಸರಕಾರದಡಿಯಲ್ಲಿ ತಾಂಡವವಾಡುತ್ತಿರುವ ಕೊಲೆ, ಸುಲಿಗೆ, ಹಿಂಸೆಗಳ ಮಧ್ಯೆ ಅಗರ್ತಲಾದ ಮಕ್ಕಳ ಉದ್ಯಾನದಲ್ಲಿ ನಡೆದ ಬೃಹತ್ ಬಹಿರಂಗ ಸಭೆ ಅಲ್ಲಿನ ಪ್ರಜಾಸತ್ತಾತ್ಮಕ ಜನತೆಯ ಪ್ರತಿಭಟಿಸುವ ಮನೋಭಾವಕ್ಕೆ ಸಂಕೇತವಾಗಿತ್ತು. ಯಾವುದೇ ಪ್ರಚಾರಮಾಡಲು, ಮೈಕ್ ಪ್ರಚಾರ ಮಾಡಲು ಅನುಮತಿ ನೀಡದಿದ್ದರೂ, ಈ ಸಭೆ ಸೇರದಂತೆ ಮಾಡಲು ಸರ್ಕಾರ ಎಲ್ಲಾ ಪ್ರಯತ್ನ ನಡೆಸಿದರೂ ಅಲ್ಲಿ ಸೇರಿದ್ದ ಜನ ಸಮುದಾಯ ಅವರ ಕೆಚ್ಚಿಗೆ ಸಾಕ್ಷಿಯಾಗಿತ್ತು. ಅಲ್ಲಿ ನೆರೆದಿದ್ದ ಜನರ ಮುಖದ ಮೇಲೆ ಈ ರಾಜ್ಯದಲ್ಲಿ ಮತ್ತೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಿಯೇ ತೀರುತ್ತೇವೆಂಬ ದೃಢ ನಿರ್ಧಾರ ಅಚ್ಚೊತ್ತಿತ್ತು.

ಮಿಲಿಟರಿಯನ್ನು ತಂದು, ಚುನಾವಣಾಧಿಕಾರಿಗಳ ಒಂದು ವಿಭಾಗವನ್ನು ! ಕೇಂದ್ರ ಮಂತ್ರಿಗಳ ನೇರ ನಾಯಕತ್ವದಲ್ಲಿದ್ದ ಸಮಾಜ ಘಾತುಕರ ಗೂಂಡಾ ಪಡೆಗಳನ್ನು ಉಪಯೋಗಿಸಿ ಪಡೆದ ಈ ಜಯ ಅವರ ಶಕ್ತಿಯ ಸಂಕೇತವಲ್ಲ ದೌರ್ಬಲ್ಯದ ಸಂಕೇತ.

ಇಡೀ ಅಗರ್ತಲಾದ ತುಂಬ ನಿರ್ಜನ ಬೀದಿಗಳು ಮುಚ್ಚಿದ ಅಂಗಡಿಗಳು ಈ ಭಯದ ವಾತಾವರಣದ ನಡುವೆ ಅಗರ್ತಲಾದ ಬೀದಿಬೀದಿಗಳಲ್ಲಿ ಕೆಂಬಾವುಟ ಹೊತ್ತ ಜನ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆಯಲ್ಲಿ ಹೊರಟ್ಟದ್ದು ಜನರಲ್ಲಿ ಧೈರ್ಯ ತುಂಬಿತು.

ಈ ಸಭೆಯಲ್ಲಿ ಮಾತನಾಡಿದ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಕಾಂ. ನೃಪೇನ್ ಚಕ್ರವರ್ತಿಯವರು ಮಿಲಿಟರಿಯನ್ನು ತಂದು, ಚುನಾವಣಾಧಿಕಾರಿಗಳ ಒಂದು ವಿಭಾಗವನ್ನು ಕೇಂದ್ರ ಮಂತ್ರಿಗಳ ನೇರ ನಾಯಕತ್ವದಲ್ಲಿದ್ದ ಸಮಾಜ ಘಾತುಕರ ಗೂಂಡಾ ಪಡೆಗಳನ್ನು ಉಪಯೋಗಿಸಿ ಪಡೆದ ಈ ಜಯ ಅವರ ಶಕ್ತಿಯ ಸಂಕೇತವಲ್ಲ ದೌರ್ಬಲ್ಯದ ಸಂಕೇತ ಎಂದರು.

ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಸದಸ್ಯ ದಶರಥ್ ದೇಬ್‌ರವರು "ನಾವು ಸೋಲಲಿಲ್ಲ.ಆದರೆ ಸೋಲನ್ನು ನಮ್ಮ ಮೇಲೆ ಹೇರಲಾಯಿತು. ಇದು ಕಣ್ಣೀರು ಸುರಿಸುವ ಸಮಯವಲ್ಲ ಹೋರಾಡಲು ದೃಢ ನಿರ್ಧಾರ ತೆಗೆದುಕೊಳ್ಳುವ ಸಮಯ. ಈ ಸರ್ಕಾರ ಜನರ ಶಕ್ತಿಯನ್ನು ಕಂಡು ಅಂಜುವ ಅಂಜುಕುಳಿ ಸರ್ಕಾರ ಅದಕ್ಕಾಗಿ ಎಲ್ಲಾ ಅಧಿಕಾರವನ್ನು ಅಧಿಕಾರಶಾಹಿಗೆ ವರ್ಗಾಯಿಸುತ್ತಿದೆ !

ನಾವು ಸೋಲಲಿಲ್ಲ. ಆದರೆ ಸೋಲನ್ನು ನಮ್ಮ ಮೇಲೆ ಹೇರಲಾಯಿತು. ಇದು ಕಣ್ಣೀರು ಸುರಿಸುವ ಸಮಯವಲ್ಲ ಹೋರಾಡಲು ದೃಢ ನಿರ್ಧಾರ ತೆಗೆದು ಕೊಳ್ಳುವ ಸಮಯ.

ಅವರ ಎಲ್ಲಾ ತಂತ್ರಗಳಿಗೂ ನಾವು ಪ್ರತಿ ತಂತ್ರ ಹೂಡಲಾಗಲಿಲ್ಲ ನಿಜ.

ದಶರಥ್ ದೇಬ್

ಆದರೆ ಒಂದು ರಣರಂಗದಲ್ಲಿ ಸೋತರೆ ಇಡೀ ಯುದ್ಧದಲ್ಲಿಯೇ ಸೋತಂತೆನಲ್ಲ ಗೂಂಡಾಗಳಿಂದ ಇತಿಹಾಸದ ಚಕ್ರವನ್ನು ಬಹಳ ಕಾಲ ಹಿಂದಕ್ಕೆ ನೂಕುವುದು ಸಾಧ್ಯವಿಲ್ಲ. ನಮ್ಮ ನಾಯಕತ್ವದಲ್ಲಿರುವ ಕಾರ್ಮಿಕರ-ರೈತರ-ಮಧ್ಯಮವರ್ಗದ ಜನರ ಐಕ್ಯತೆ, ಕೊನೆಯ ಯುದ್ಧದಲ್ಲಿ ವಿಜಯ ಸಾಧಿಸಿಯೇ ತೀರುವುದು ಎಂದು ದಶರಥ್ ದೇಬ್ ಘೋಷಿಸಿದರು.

ತ್ರಿಪುರಾದಲ್ಲಿ ನಡೆದ ವಿಕೃತ ಚುನಾವಣೆಗಳು

ಆಗರ್ತಲಾದಲ್ಲಿ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದ ನೃಪೇನ್ ಚಕ್ರವರ್ತಿಯವರು ತ್ರಿಪುರಾದಲ್ಲಿ ನಡೆದ ಚುನಾವಣೆಗಳನ್ನು ವಿವಿಧ ಹಂತಗಳಲ್ಲಿ ವಿಕೃತಗೊಳಿಸಿದ್ದನ್ನು ವಿವರವಾಗಿ ತೆರೆದಿಟ್ಟದ್ದಾರೆ. ಕಾಂಗ್ರೆಸ್ ಏಕಪಕ್ಷ ಸರ್ವಾಧಿಕಾರದ ಬಯಕೆ ಎಷ್ಟು ದೂರ ಹೋಗಬಹುದೆಂಬುದು ಇಡೀ ದೇಶದ ಜನತೆ ವಿರೋಧ ಪಕ್ಷಗಳ ಸರ್ಕಾರಕ್ಕೆ ಕಣ್ತೆರಸಬೇಕು. ಅಂದು 72ರಲ್ಲಿ ಪ. ಬಂಗಾಳಕ್ಕೆ ವಕ್ರಿಸಿದ ತುರ್ತು ಸ್ಥಿತಿಯನ್ನು 77ರಲ್ಲಿ ದೇಶದೆಲ್ಲಾ ಜನ ಅನುಭವಿಸಬೇಕಾಯಿತೆಂಬುದನ್ನು ಮರೆಯಬಾರದು.

ನೃಪೇನ್ ಹೇಳಿದರು: ಮೊದಲು ಕೇಂದ್ರ ಮಂತ್ರಿ ಸಂತೋಷ್ ಮೋಹನ್‌ದೇಬ್‌ರನ್ನು ರಾಜ್ಯಕ್ಕೆ ಕಳುಹಿಸಲಾಯಿತು. ಅವರು ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದ ಕೇಂದ್ರ ಸೇವೆಗಳ ಜನರಾದ ಐ.ಎ.ಎಸ್. ಮತ್ತು ಐ.ಪಿ.ಎಸ್. ಜನರನ್ನು ಬೆದರಿಸಿದರು. ನಂತರ ಬಂದದ್ದು ಗೃಹ ಖಾತೆಯ ರಾಜ್ಯ ಮಂತ್ರಿ ಚಿದಂಬರಮ್‌ರವರ ಸರದಿ. ಅವರು ಇಡೀ ರಾಜ್ಯದ ಪೋಲಿಸ್ ಪಡೆಯನ್ನು ನಿಷ್ಕ್ರಿಯಗೊಳಿಸಿದರು.

ನಂತರ ಸಂತೋಷ್ ಮೋಹನ್ ದೇಬ್ ತನ್ನ ಹಿಂಬಾಲಕರಿಗೆ ಪೋಲಿಸರ ಮೇಲೆ ಬೀಳಲು ಪ್ರಚೋದಿಸಿದರು. ಈಗ ತ್ರಿಪುರಾದಲ್ಲಿ ಗೃಹ ಮಂತ್ರಿಯವರೇ ಕೊತ್ವಾಲಿ ಈಸ್ಟ್‌ನ ಠಾಣೆಯ ಮೇಲೆ ಧಾಳಿ ಮಾಡಲು ನಾಯಕತ್ವ ನೀಡಿದರು. ಕೈಲಾಸ್ ಶಹರನಲ್ಲಿ ಪೋಲಿಸರ ಕಸ್ಟಡಿಯಲ್ಲಿದ್ದ ಅಪರಾಧಿಗಳನ್ನು ಧಾಳಿ ಮಾಡಿ ಬಿಡಿಸಿಕೊಂಡು ಹೋಗಲಾಯಿತು. ಸಮಾಜ ಘಾತುಕರು ಇಂದಿನ ಮುಖ್ಯಮಂತ್ರಿಯ ಗೌರವಾನ್ವಿತ ಅತಿಥಿಗಳಾಗಿದ್ದರು. ಸಂತೋಷ್ ಮೋಹನ್ ದೇಬ್‌ರವರ ಅಂಗರಕ್ಷಕನಾಗಿ ಮೂರು ಕೊಲೆಗಳನ್ನು ಮಾಡಿದ್ದ ಗೂಂಡಾನನ್ನು ನೇಮಕ ಮಾಡಲಾಯಿತು.

ನಂತರ ಬಂದದ್ದು ಪ್ರಧಾನ ಮಂತ್ರಿಯವರ ಅಪಪ್ರಚಾರದ ಹಾಗೂ ಪೊಳ್ಳು ಭರವಸೆಗಳ ಸುರಿ ಮಳೆ.

ಮುಂದಿನ ಹಂತ ಸೈನ್ಯವನ್ನು ನುಗ್ಗಿಸಿ ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ಚುನಾವಣೆಗಳಲ್ಲಿ ಬಳಸಿಕೊಂಡದ್ದು. ಕೇಂದ್ರ ಮಂತ್ರಿಗಳು ಅಗರ್ತಲಾದಲ್ಲಿ ಕ್ಯಾಂಪ್ ಮಾಡಿ ಮತದಾರರು ಎಡರಂಗಕ್ಕೆ ಮತನೀಡದಿರುವಂತೆ ಮಾಡಲುಸೈನ್ಯಕ್ಕೆ ನಿರ್ದೇಶನ

ನೃಪೇನ್ ಚಕ್ರವರ್ತಿ

ನೀಡಿದರು. ಸೈನ್ಯ ಪಡೆಗಳು ಅಡಿಗೆ ಮನೆಗೂ ಹೊಕ್ಕು ಮತದಾರರನ್ನು ಬೆದರಿಸಿದರು. ಇನ್ನು ಚುನಾವಣಾಧಿಕಾರಿಗಳ ಮೇಲೆ ತಂದ ಒತ್ತಡವನ್ನು ನೋಡೋಣ !

ಇಂದು ಮುಖ್ಯ ಮಂತ್ರಿಯಾಗಿರುವ ಸುಧೀರ್ ಗೂಂಡಾಪಡೆಯೊಂದಿಗೆ ಉಪವಿಭಾಗಾಧಿಕಾರಿಗಳ ಕಛೇರಿಯನ್ನು ಹೊಕ್ಕು ಅವರನ್ನು ಬೆದರಿಸಿದರು. ಅವರು ಮತ ಚೀಟಿಗಳ ಮೇಲೆ ತಮ್ಮ ಸಹಿ ಹಾಕುತ್ತಿದ್ದಾರೆಂದು ಅವರ ಅಪಾದನೆ. ಅದೇ ಸಮಯದಲ್ಲಿ ಆಕಾಶವಾಣಿ ಹಾಗೂ ದೂರದರ್ಶನದಲ್ಲಿ ಈ ಸದ್ದಿಯನ್ನು ಬಿತ್ತರಿಸಿ ಅವು ಈ ಕುತ್ಸಿತ ಸಂಚಿನಲ್ಲಿ ತಮ್ಮ ಪಾತ್ರ ವಹಿಸಿದುವು, ಈ ಘಟನೆಯ ನಂತರ ರಾಜ್ಯದ ಅಧಿಕಾರಿಗಳೆಲ್ಲಾ ಒಟ್ಟಾಗಿ ತಮ್ಮ ಕೆಲಸವನ್ನು ನಿಲ್ಲಿಸುತ್ತೇವೆಂದು ಹೇಳಿದರು. ಆದರೆ ನಾವು ಅವರೆಲ್ಲಾ ತಮ್ಮ ಕೆಲಸವನ್ನು ಮುಂದುವರೆಸಬೇಕೆಂದು ಹೇಳಿದೆವು ನಂತರ ಮತ ಎಣಿಕೆಯಲ್ಲಾದ ಅವಾಂತರವನ್ನು ಮಜ್ಲಿಸ್ ಪುರದ ಘಟನೆಯನ್ನು ಕಾಂ. ನೃಪೇನ್ ವಿವರಿಸಿ ಅವರು ಏನು ಮಾಡಿದರೂ ಕೊನೆಗೆ ಗೆಲ್ಲುವುದು ಜನ ಶಕ್ತಿಯೊಂದೆ ಎಂದು ಸಾರಿದರು. ●

ತ್ರಿಪುರಾ ರಾಜ್ಯ ಸಮಿತಿಯ ಹೇಳಿಕೆ

ಧಾಳಿಯನ್ನು ಧೈರ್ಯ ಮತ್ತು ಸಂಘಟನೆಯಿಂದ ಎದುರಿಸಿ

ಇತ್ತೀಚೆಗೆ ಜರುಗಿದ ಪಕ್ಷದ ತ್ರಿಪುರಾ ರಾಜ್ಯ ಸಮಿತಿಯ ಸಭೆ ಕಾಂಗ್ರೆಸ್-ಟಿಯುಜೆಎಸ್ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದ ಆರಂಭವಾಗಿರುವ ಸಮಾಜ ಘಾತುಕ ಶಕ್ತಿಗಳ ಭಯೋತ್ಪಾದಕತೆಯನ್ನು ವಿಮರ್ಶಿಸಿತು. ತ್ರಿಪುರಾದ ಇಂದಿನ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದ ಜರುಗಿದ ಘಟನೆಗಳನ್ನು ಒಂದೊಂದಾಗಿ ಖಂಡಿಸಿದೆ.

ಸೈನ್ಯ ಪಡೆಗಳು ಮತ್ತು ಅರೆ ಸೈನ್ಯ ಪಡೆಗಳು ನೀಡಿರುವ ರಕ್ಷೆಯ ಬೆಂಗಾವಲಿನಲ್ಲಿ ಕ್ರಿಮಿನಲ್‌ಗಳನ್ನು ಉಪಯೋಗಿಸಿ ಎಡರಂಗದ ಪಕ್ಷಗಳ ಮುಖ್ಯವಾಗಿ ಸಿಪಿಐ(ಎಂ) ಬೆಂಬಲಿಗರ ಮೇಲೆ ಧಾಳಿ ನಡೆಸುತ್ತಿದ್ದಾರೆ. ಮಹಿಳೆಯರ ಜೊತೆ ಅಸಭ್ಯವರ್ತನೆ, ಅಧಿಕಾರಿಗಳ ಮೇಲೆ, ಶಾಲೆಗಳ ಮೇಲೆ ಧಾಳಿ, ಪಕ್ಷದ ಕಛೇರಿಗಳ ಮೇಲೆ ಧಾಳಿ, ಒತ್ತಾಯದಿಂದ ಹಣ ವಸೂಲಿ, ಕೆಂಪು ಧ್ವಜವನ್ನು ಸುಡುವುದು, ವಾರಂಟುಗಳಿಲ್ಲದೆ ಮನೆ ಮನೆಗಳನ್ನು ಪ್ರವೇಶಿಸುವುದು, ಇತ್ಯಾದಿ.

ಸರ್ಕಾರಿ ನೌಕರರ ಸಂಘದ ನಾಯಕನಿಗೆ ಚಿತ್ರ ಹಿಂಸೆ

ಅವರ ಇತ್ತೀಚಿನ ಅಪರಾಧವೆಂದರೆ ನೌಕರರ ಸಂಘದ ನಾಯಕರೊಬ್ಬರ ಮೇಲೆ ಕೊಲೆ ಅಪಾದನೆ ಹೊರಿಸಿ ಚಿತ್ರ ಹಿಂಸೆ ನೀಡಿರುವುದು. ಅನೇಕ ಮನೆಗಳನ್ನೇ ನಾಶಮಾಡಿರುವುದು. ಇವೆಲ್ಲಾ ಕೃತ್ಯಗಳು ಗೃಹ ಮಂತ್ರಿಯಾದ ಸಮೀರ್‌ರಂಜನ್ ಬರ್ಮನ್‌ನ ನೇರನಿರ್ದೇಶನದಲ್ಲಿಯೇ ನಡೆಯುತ್ತಿದೆ.

ಪೌರಾಡಳಿತ ಸಂಸ್ಥೆಗಳ ಮೇಲೆ ಧಾಳಿ

ಈ ಶ್ವೇತ ಹಿಂಸೆಯ ಜೊತೆಜೊತೆಗೇ ಪ್ರಜಾಪ್ರಭುತ್ವದ ಸಂಸ್ಥೆಗಳ ಮೇಲೆ ಧಾಳಿ ಆರಂಭವಾಗಿದೆ. ಅಗರ್ತಲಾ ಪುರಸಭೆಯನ್ನು ವಿಸರ್ಜಿಸಲಾಗಿದೆ. ಪಂಚಾಯತಿಗಳ, ಕ್ಷೇತ್ರಾಭಿವೃದ್ಧಿ ಸಮಿತಿಗಳ ಅಧಿಕಾರಗಳನ್ನು ಅಧಿಕಾರಶಾಹಿಗೆ ವರ್ಗಾಯಿಸಲಾಗಿದೆ. ನೋಟಿಫೈಡ್ ಪ್ರದೇಶಗಳ ಸಮಿತಿಗಳನ್ನು ವಿಸರ್ಜಿಸಲಾಗಿದೆ. ತ್ರಿಪುರಾವಿಶ್ವ ವಿದ್ಯಾನಿಲಯದ ಪ್ರಗತಿಪರ ಪ್ರತಿನಿಧಿಗಳನ್ನು ವಿಸರ್ಜಿಸಲಾಗಿದೆ. ಎಲ್ಲಾಪ್ರಜಾ ಸತ್ತಾತ್ಮಕ ಸಂಸ್ಥೆಗಳನ್ನು ಕಿತ್ತು ಹಾಕುವ ಸಂಚು ನಡೆಯುತ್ತಿದೆ.

ಸಂಸ್ಕೃತಿಯ ಮೇಲೆ ಧಾಳಿ

ಹೊಸ ಸರ್ಕಾರ ಸಾಂಸ್ಕೃತಿಕ ರಂಗದ ಮೇಲೆ ಹೊಸಧಾಳಿ ಆರಂಭಿಸಿದೆ. 89 ಕಲಾವಿದರನ್ನು ಬೀದಿಗೆಸೆಯಲಾಗಿದೆ. ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್, ರವೀಂದ್ರ,ನಜರುಲಾ ಹಾಗೂ ಸುಕಾಂತೊರವರ ಫೋಟೊಗಳನ್ನು ನಾಶಮಾಡಲಾಗಿದೆ. ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಸುಡಲಾಗಿದೆ.

ಗೂಂಡಾಗಳಿಂದ ಇತಿಹಾಸದ ಚಕ್ರವನ್ನು ಬಹಳ ಕಾಲ ಹಿಂದಕ್ಕೆ ನೂಕುವುದು ಸಾಧ್ಯವಿಲ್ಲ.

ಸಿಬ್ಬಂದಿ ನೇಮಕಾತಿ

ಎಡರಂಗ ಸರ್ಕಾರದ ಸಿಬ್ಬಂದಿ ನೇಮಕಾತಿ ನೀತಿ ಇಡೀ ಭಾರತದಲ್ಲಿಯೇ ಅತ್ಯುತ್ತಮವೆಂಬ ಶ್ಲಾಘನೆಗೆ ಪಾತ್ರವಾಗಿತ್ತು. ಹರಿಜನ, ಗಿರಿಜನ, ಮುಸ್ಲಿಮರು, ಮಣಿಪುರಿಗಳು ಮೊದಲಾದ ಎಲ್ಲಾ ಹಿಂದುಳಿದ ಜನಾಂಗಕ್ಕೆ ಪ್ರಾತಿನಿಧ್ಯ ನೀಡಲಾಗಿತ್ತು. ಇಂತಹ

(6 ನೇ ಪುಟ ನೋಡಿ)

ಕಲಾವಿದರ ಮೇಲೆ ಪ್ರತಿಕಾರ ಕ್ರಮ

ಗಿರಿಜನ ಹಾಗೂ ಗಿರಿಜನೇತರ ಕಲಾವಿದರ ಒಗ್ಗಟ್ಟಿನ ಸಂಕೇತವಾಗಿದ್ದ ಮತ್ತು ರಾಜ್ಯದ ಸಾಂಸ್ಕೃತಿಕ ಸಂಪತ್ತಿನ ಶ್ರೀಮಂತ ಪ್ರತಿನಿಧಿಯಾಗಿದ್ದ ವಾರ್ತಾ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ 89 ಕಲಾವಿದರನ್ನು ತ್ರಿಪುರಾ ಸರ್ಕಾರ ಹೊರ ಹಾಕಿದೆ ಎಡರಂಗ ಸರ್ಕಾರದಡಿಯಲ್ಲಿ ಆರಂಭವಾಗಿದ್ದ ಜನಪದ ಸಂಸ್ಕೃತಿಯ ಪುನರುತ್ಥಾನ ದೇಶಕ್ಕೆಲ್ಲಾಒಂದು ಮಾದರಿಯಾಗಿತ್ತು. ಎಲ್ಲಾ ಪ್ರತಿಗಾಮಿ ಸಂಸ್ಕೃತಿಯ ವಿರುದ್ಧ ಒಂದು ದೊಡ್ಡ ಹೋರಾಟವನ್ನು ಹೂಡಲಾಯಿತು. ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವ ಉನ್ನತ ಧ್ಯೇಯವನ್ನು ಸಾಧಿಸಲು ಜನರಲ್ಲಿ ಸ್ಫೂರ್ತಿ ತುಂಬಲಾಯಿತು.

ತೀವ್ರ ಪ್ರಚೋದನೆಗಳ ವಿರುದ್ಧ ಈ ಕಲಾವಿದರು ದೃಢವಾಗಿ ನಿಂತರು ಮತ್ತು ವಿವಿಧ ಕಲಾ ರೂಪಗಳನ್ನು ಬಳಸಿ ಜಾತೀವಾದ, ಪ್ರತ್ಯೇಕತಾವಾದ ಮತ್ತು ಭಯೋತ್ಪಾದಕತೆಯ ವಿರುದ್ಧ ಪ್ರಚಾರ ಮಾಡಿದರು. ಕೋಮುವಾದೀ ಹಿಂಸೆಯ ಅಲೆ ಜನಗಳನ್ನು ಕೊಲ್ಲುತ್ತಿದ್ದಾಗ 400ಕ್ಕೂ ಹೆಚ್ಚು ಕಲಾವಿದರು ಐಕ್ಯತೆಯ ಹೋರಾಟಕ್ಕೆ ಸೇರಿದರು. ಈ ಕಲಾ ಹೋರಾಟದ ಮುಂಚೂಣಿಯಲ್ಲಿದ್ದವರು ಈ 89 ಕಲಾವಿದರು.

ಈ ಕಲಾವಿದರನ್ನು ಹೊರ ಹಾಕಿ ಕಲಾವಿದರ ಮೇಲೆ ಹಾಗೂ ಸರ್ಕಾರದ ಸಿಬ್ಬಂದಿಯ ಮೇಲೆ ಮಾಡಿದ ಧಾಳಿಯನ್ನು ಪ್ರಜಾಸತ್ತಾತ್ಮಕ ಬರಹಗಾರರು ಹಾಗೂ ಕಲಾವಿದರು, ತ್ರಿಪುರಾ ಅಪೇರಾ ಕಲಾವಿದರ ಸಂಘ, ತ್ರಿಪುರಾ ಜನ ಪದ ಕಲಾವಿದರ ವೇದಿಕೆ, ಕೋಕ್ ಬೊರಕ್ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಿಷತ್ತು ಖಂಡಿಸಿವೆ

ಭಾರತ್ ಬಂದ್‌ಗೆ ಮುನ್ನಡೆಯಿರಿ

(7ನೇ ಪುಟದಿಂದ)

ಎಂದು ಅನ್ನಿಸುವ ರಾಜ್ಯ ಸರ್ಕಾರಗಳನ್ನು ವಜಾ ಮಾಡುವುದಾಗಿ ಬಹಿರಂಗವಾಗಿ ಸಾರಿದ್ದಾರೆ. ಕೇರಳದ ಪ್ರಥಮ ಕಮ್ಯುನಿಸ್ಟ್ ಸರ್ಕಾರದ ವಿರುದ್ಧ 1959ರಲ್ಲಿ ನಡೆಸಿದ "ವಿಮೋಚನಾ ಸಮರ"ವನ್ನು ಈತ ಈಗ ಉಲ್ಲೇಖಿಸುತ್ತಿದ್ದಾರೆ.

ಈತ ಇತ್ತೀಚಿಗೆ ತ್ರಿಪುರಾ ಚುನಾವಣೆಯಲ್ಲಿ ಮಾಡಿದ ಕೃತ್ಯ ಈಗ ಯಾವುದೇ ಅನುಮಾನವನ್ನು ಉಳಿಸಿಲ್ಲ. ಎಡರಂಗದ ವಿರುದ್ಧ ಕೆಟ್ಟ ಅಪಪ್ರಚಾರ ನಡೆಸಿದ್ದು ಮಾತ್ರವಲ್ಲ, ರಾಜ್ಯ ಸರ್ಕಾರವನ್ನು ಕೇಳದೆ ಚುನಾವಣೆಗೆ 3ದಿನಗಳ ಮೊದಲು ಇಡೀ ತ್ರಿಪುರವನ್ನು "ಗಲಭೆ ಪೀಡಿತ ಪ್ರದೇಶ" ವೆಂದು ಸಾರಿದುದು ಚುನಾವಣೆ "ಗೆಲ್ಲುವ" ಎಲ್ಲಾ ತಂತ್ರ ಅನುಸರಿಸಿತು. ಚುನಾವಣಾಮಂಡಳಿ ಕೇಂದ್ರ ಸರ್ಕಾರದ ಏಜೆಂಟಾಗಿ ಪರಿವರ್ತಿಸಲಾಯಿತು.

ಯಾವುದೇ ಪ್ರತಿಭಟನೆ ಪ್ರದರ್ಶನ ಈತನ ಮೇಲೆ ಯಾವ ಪ್ರಭಾವ ಬೀರುವುದಿಲ್ಲ. ಹರ್‍ಯಾಣಾ ಚುನಾವಣೆಯಲ್ಲಿ ಗೆಲ್ಲಬೇಕೆಂಬ ಏಕೈಕ ಕಾರಣಕ್ಕಾಗಿ ಬರ್ನಾಲ ಸರ್ಕಾರವನ್ನು ವಜಾ ಮಾಡಿತು, ಆದರೆ ಗೆಲ್ಲಲು ಸಾಧ್ಯವಾಗಲಿಲ್ಲ.

ಈ ಎಲ್ಲದರ ಮೇಲೆ ಈಗ ರಾಜೀವ್ ಸರ್ಕಾರಭ್ರಷ್ಟಾಚಾರದ ಆಪಾದನೆಗೆ ಗುರಿಯಾಗಿದೆ. ಬೋಫೋರ್ಸ್, ಜಲಂತರ್‌ಗಾಮಿ ಒಪ್ಪಂದ ಮತ್ತು ಫೇರ್‌ಫ್ಯಾಕ್ಸ್‌ಗಳು ಉನ್ನತ ಮಟ್ಟದಲ್ಲಿ ಕೋಟ್ಯಾಂತರ ರೂಪಾಯಿ ಭ್ರಷ್ಟಾಚಾರವಾಗಿರುವುದನ್ನು ಹೊರಗೆಡವಿವೆ. ಕೇಂದ್ರ ಸರ್ಕಾರದ ಮೇಲೆ ಜನತೆ ಇರಿಸಿರುವ ವಿಶ್ವಾಸಕ್ಕೆ ಇದು ದೊಡ್ಡ ಘಾಸಿಯಾಗಿದೆ.

ಆದ್ದರಿಂದ ಈ ಎಲ್ಲಾ ಕಾರಣದಿಂದಾಗಿ ಜನತೆ ಅನಿವಾರ್ಯವಾಗಿ ಹೊಸಪಥ ಹಿಡಿಯಬೇಕಾಗಿದೆ. ಇಂತಹ ಭ್ರಷ್ಟ ಪ್ರಭುತ್ವವನ್ನು ಅಧಿಕಾರದಿಂದ ಇಳಿಸುವ ಹೊಸಮಾರ್ಗ ಅನುಸರಿಸಬೇಕಾಗಿದೆ. ವಿರೋಧ ಪಕ್ಷಗಳ ಬೆಂಬಲಿಸುವ ಜನತೆ ಮಾತ್ರವಲ್ಲ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ ಜನರಿಗೂ ಈಗ ಭ್ರಮನಿರಸನವಾಗಿದೆ. ಈಗಿನ ರಾಜೀವ್‌ಗಾಂಧಿ ಸರ್ಕಾರವನ್ನು ಅಧಿಕಾರದಲ್ಲಿ ಮುಂದುವರಿಸಿದ್ದೇ ಆದಲ್ಲಿ ಪರಿಸ್ಥಿತಿ ಇನ್ನಷ್ಟು ಬಿಕ್ಕಟ್ಟಿಗೆ ಸಿಲುಕಲಿದೆ ಮಾತ್ರವಲ್ಲ, ರಾಷ್ಟ್ರೀಯ ಐಕ್ಯತೆ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕಲಿದೆ- ಜನರಸಂಕಷ್ಟ ಹೆಚ್ಚಲಿದೆ. ತತ್ಪರಿಣಾಮವಾಗಿ ವಿರೋಧ ಪಕ್ಷಗಳು ಜನತೆಯನ್ನು ಈ ಸ್ಥಿತಿಯಿಂದ ಬಿಡುಗಡೆಗೊಳಿಸಲು ಅಣಿನೆರಸಲು ತೀರ್ಮಾನಿಸಿವೆ.

ಡಿಸೆಂಬರ್ 9 ರಂದು ಎಡ ಪಕ್ಷಗಳು ನೀಡಿದ ರ್‍ಯಾಲಿ ಕರೆಗೆ ಜನತೆ ಅಭೂತಪೂರ್ವ ಬೆಂಬಲ ನೀಡಿದ್ದರು. ನಂತರ ಪಶ್ಚಿಮ ಬಂಗಾಳದಲ್ಲಿ 4,500 ಕಿ.ಮೀ ದೂರವನ್ನು ಕ್ರಮಿಸುವ ಮಾನವ ಸರಪಳಿಗೆ 6 ಮಿಲಿಯ ಜನತೆ ಕೊಂಡಿಯಾಗಿ ನಿಂತು ದಾಖಲೆ ನಿರ್ಮಿಸಿದರು. ಈಗ ಭಾರತ್ ಬಂದ್ ಕರೆಗೆ ಎಡಪಕ್ಷಗಳ ಬೆಂಬಲ ಮಾತ್ರವಲ್ಲ ಇತರೆಜಾತ್ಯಾತೀತ ಪಕ್ಷಗಳ ಸಹಕಾರವು ಇದೆ. ವಿವಿಧ ರಾಜಕೀಯ ಪಕ್ಷಗಳ ಮುಂಖಂಡರು ಮಾತನಾಡುವ ಸಾರ್ವಜನಿಕ ಸಭೆಗಳು ದೇಶದಾದ್ಯಂತ ನಡೆಯುತ್ತಿದೆ.

ಇನ್ನು ಭಾರತ್ ಬಂದ್‌ಗೆ ಕೆಲವೇ ಸಮಯ ಉಳಿದಿದೆ. ಈ ಕರೆಯನ್ನು ಯಶಸ್ವಿಗೊಳಿಸಲು ಎಲ್ಲಾ ಪ್ರಯತ್ನ ನಡೆಸಬೇಕು. ಕೈಗಾರಿಕಾ ಘಟಕಗಳಲ್ಲಿ, ವಾಣಿಜ್ಯ ಸಂಕೀರಣಗಳಲ್ಲಿ, ವಿದ್ಯಾಸಂಸ್ಥೆಗಳಲ್ಲಿ ಪೂರ್ಣ ಮುಷ್ಕರದ ಖಾತರಿ ಇದೆ. ಈ ಕರೆ ಯಶಸ್ವಿಯಾಗುವಂತೆ ಎಲ್ಲಾ ಜನ ವಿಭಾಗಗಳನ್ನು ಒಳಗೊಳಿಸಬೇಕು. ಪರಿಸ್ಥಿತಿಯಲ್ಲಿ ಬದಲಾವಣೆ ತರಲು, ರಾಜೀವ್ ಗಾಂಧಿ ಸರಕಾರ ರಾಜೀನಾಮೆ ನೀಡಿ-ಮತ್ತೆ ಜನಮತ ಪಡೆಯಲು ಹಾಗು ಜನತೆ ತಮ್ಮ ನಿರೀಕ್ಷೆಯನ್ನು ಈಡೇರಿಸಬಲ್ಲ ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳಲು ಪೂರಕವಾಗಿ ಈ ಬಂದ್ ಕರೆಯನ್ನು ನೀಡಲಾಗಿದೆ.

● ಹರ್‌ಕಿಶನ್‌ಸಿಂಗ್ ಸುರ್ಜಿತ್

● ಕನ್ನಡಕ್ಕೆ : ಕುಮಾರ್ ಕುಂದಾಪುರ

ತ್ರಿಪುರಾ ಜನತೆಗೆ ನೆರವಾಗೋಣ

(4ನೇ ಪುಟ ದಿಂದ)

ಇವಕ್ಕೆ ತ್ರಿಪುರಾ ಜನತೆಯ ಉತ್ತರವೇನು ? ಹೋರಾಟಶೀಲ ಜನತೆ ವಿಚಲಿತವಾಗಿಲ್ಲ. ಫೆಬ್ರವರಿ 14 ರಂದು ಅಗರ್ತಲಾದಲ್ಲಿ 15 ಸಾವಿರ ಜನ ಸೇರಿ ಕಾಂಗ್ರೆಸ್ (ಐ)ನ ಭಯೋತ್ಪಾದಕತೆಯನ್ನು ಖಂಡಿಸಿ ಪ್ರಜಾತಂತ್ರ ಶಕ್ತಿಗಳ ಐಕ್ಯತೆಯನ್ನು ದೃಢ ಪಡಿಸಿದ್ದಾರೆ. ಭಯೋತ್ಪಾದಕತೆಯನ್ನು ಎದುರಿಸುವ ನಿರ್ಧಾರ ಮಾಡಿದ್ದಾರೆ. ದೇಶದ ಎಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳು ಅವರ ಈ ದೃಢ ನಿರ್ಧಾರವನ್ನು ಮೆಚ್ಚಿವೆ. ಇಂತಹ ವಿಕಟ ಪರಿಸ್ಥಿತಿಯಲ್ಲೇ ಜನತೆಯ ಹೋರಾಟ ಸಾಮರ್ಥ್ಯದ ಪರೀಕ್ಷೆಯಾಗುವುದು.

ತ್ರಿಪುರಾದ ಘಟನೆಗಳು ಭಾರತದಲ್ಲಿ ಪ್ರಜಾಪ್ರಭುತ್ವ ಶಕ್ತಿಗಳ ವಿರುದ್ಧ ಹಲ್ಲೆಗಳ ಒಂದು ಭಾಗ ಎಂಬುದು ಎಲ್ಲರಿಗೂ ಅರಿವಾಗುತ್ತಿದೆ. ಫೆಬ್ರವರಿ 23 ರಂದು ಭಾರತ್ ಬಚಾವೋ ದಿನ ದಂದು ದೆಹಲಿಯಲ್ಲಿ ಮಾತನಾಡುತ್ತಾ ಇದು ದೇಶದಲ್ಲಿ ಅಘೋಷಿತ ತುರ್ತು ಪರಿಸ್ಥಿತಿಯ ಆರಂಭ ಎಂದು ಜನತಾ ಪಕ್ಷದ ಮುಖಂಡ ಶ್ರೀಮಧು ದಂಡವತೆ ಹೇಳಿದ್ದಾರೆ.

ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ಸಂವಿಧಾನದ ವಿರುದ್ಧ ಈ ಸರ್ವಾಧಿಕಾರೀ ಹಲ್ಲೆಯನ್ನು ಬಲವಾಗಿ ಖಂಡಿಸಿ ರಾಜೀವ್ ಗಾಂಧಿಯ ಈ ಹೊಸ ಕೃತ್ಯದ ವಿರುದ್ಧ ಜನ ಜಾಗೃತಿ ಹರಡಬೇಕು. ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯಿಂದ ಪೀಡಿತರಾದವರಿಗೆ ನೆರವಾಗಲು ನಿಧಿಸಂಗ್ರಹಕ್ಕೆ ಸಿ.ಪಿ.ಐ. (ಎಂ) ನೀಡಿರುವ ಕರೆಗೆ ಓಗೊಟ್ಟು ಉದಾರವಾಗಿ ನೆರವು ನೀಡಬೇಕು. ತ್ರಿಪುರಾದ ಹೋರಾಟ ನಿರತ ಸಂಗಾತಿಗಳಿಗೆ, ಹೋರಾಟ ನಿರತ ರಾಜ್ಯ ಸಮಿತಿಗೆ, ಹೋರಾಟ ನಿರತ ಜನತೆಗೆ ದೇಶಾದ್ಯಂತ ಪಕ್ಷದ ಎಲ್ಲಾ ಘಟಕಗಳ ಪೂರ್ಣ ನೆರವಿನ ಭರವಸೆ ನೀಡುವಂತೆ ಪಕ್ಷದ ಸಂಪೂರ್ಣ ಶಕ್ತಿಯನ್ನು ತೊಡಗಿಸಬೇಕು.

ಎಲ್ಲಾ ಎಡ, ಪ್ರಜಾಪ್ರಭುತ್ವ ಹಾಗೂ ವಿರೋಧ ಪಕ್ಷಗಳು ಭಾರತ್ ಬಂದ್ ಕರೆಯನ್ನು ಬಲಗೊಳಿಸಿ, ರಾಜೀವ್‌ಗಾಂಧಿ ರಾಜೀನಾಮೆಗಾಗಿ ವ್ಯಾಪಕ ಜನಾಭಿಪ್ರಾಯ ಮೂಡಿಸಬೇಕು; ಈಗ ಈ ಹೋರಾಟದ ಅಗ್ರ ಪಂಕ್ತಿಯಲ್ಲಿರುವ ತ್ರಿಪುರಾ ಜನತೆಗೆ ಸಕಲ ನೆರವು ನೀಡಬೇಕು.

(ಪಿ.ಡಿ. ಸಂಪಾದಕೀಯದಿಂದ)

ದಾಳಿಯನ್ನು ಧೈರ್ಯ ಮತ್ತು ಸಂಘಟನೆಯಿಂದ ಎದುರಿಸಿ

(5 ನೇ ಪುಟದಿಂದ)

ನೀತಿಯ ಜೊತೆಯಲ್ಲಿ ಯಾವುದೇ ಆಟವಾಡುವುದನ್ನು ರಾಜ್ಯ ಸಮಿತಿ ವಿರೋಧಿಸುತ್ತದೆ. ನೇಮಕ ವಾದವರೆಲ್ಲರಿಗೂ ನೇಮಕಾತಿ ಆಜ್ಞೆಯನ್ನು ನೀಡಬೇಕೆಂದು ಒತ್ತಾಯಿಸುತ್ತದೆ. ಕೆಲಸಕ್ಕೆ ತೆಗೆದುಕೊಂಡವರೆಲ್ಲರಿಗೂ ಮಾಸಿಕ ವೇತನ ನೀಡಬೇಕೆಂದು ಒತ್ತಾಯಿಸುತ್ತದೆ. ರಾಜ್ಯ ಸಮಿತಿಯು ನೇಮಕಾತಿ ನೀತಿಯನ್ನು ರಕ್ಷಿಸಲು ಹೋರಾಟ ನಡೆಸಬೇಕೆಂದು ರಾಜ್ಯದ ಎಲ್ಲಾ ಯುವ ಜನತೆಗೆ ಕರೆ ನೀಡುತ್ತದೆ.

ಹಕ್ಕುಗಳ ರಕ್ಷಣೆ

ಎಡರಂಗ ಸರ್ಕಾರ ನೀಡಿದ ಹಕ್ಕುಗಳ ಬಗ್ಗೆ ಪ್ರಸ್ತಾಪಿಸುತ್ತಾ, ಸಂಘಟನೆಯ ಹಕ್ಕುಗಳು, ಕೇಂದ್ರ ಸರ್ಕಾರದ ಕರಾಳ ಕಾಯಿದೆಗಳನ್ನು ಜಾರಿಗೆ ತರಲು ನಿರಾಕರಣೆ, ಪುರುಷರು ಮತ್ತು ಮಹಿಳೆಯರಿಗೆ ಸಮಾನ ಹಕ್ಕುಗಳು, ವಕ್ಫ್ ಬೋರ್ಡುಗಳ ಮೂಲಕ ಮುಸ್ಲಿಂ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಸ್ವಾಯತ್ತ ಅಭಿವೃದ್ಧಿ ಮಂಡಳಿಗಳಿಗೆ ಹೆಚ್ಚು ಅಧಿಕಾರ ಮೊದಲಾದ ಹಕ್ಕುಗಳ ಮೇಲೆ ಧಾಳಿ ಮಾಡಲು ಹೊಸ ಸರ್ಕಾರಕ್ಕೆ ಅವಕಾಶನೀಡಬಾರದೆಂದು ಜನತೆಗೆ ಮನವಿ ಮಾಡುತ್ತದೆ.

ಭರವಸೆಗಳ ಸುರಿಮಳೆ

ಪ್ರಧಾನ ಮಂತ್ರಿ ರಾಜೀವ್ ಗಾಂಧಿಯವರು ಚುನಾವಣೆಗಳ ಸಮಯದಲ್ಲಿ ಸುರಿಸಿದ ಭರವಸೆಗಳ ಸುರಿಮಳೆಯ ಬಗ್ಗೆ ಪ್ರಸ್ತಾಪಿಸುತ್ತಾ, ರಾಜ್ಯ ಸಮಿತಿಯು, ರೈಲ್ವೆ, ಮಾರ್ಗ ವಿಸ್ತರಣೆ, ರಾಜ್ಯದ ಕೈಗಾರೀಕರಣ ಎಲ್ಲಾ ಮನೆಗಳಿಗೂ ವಿದ್ಯುತ್ ಮೊದಲಾದ ಭರವಸೆಗಳನ್ನು ನಿಜ ರೂಪದಲ್ಲಿ ಕಾಣಲು ವಿಧಾನ ಸಭೆಯ ಒಳಗೆ ಹೊರಗೆ ಹೋರಾಡಬೇಕೆಂದು ಸಂಬಂಧಿಸಿದ ಎಲ್ಲರಿಗೂ ಒತ್ತಾಯಿಸುತ್ತದೆ.

ಸಾಲ ಮೇಳ

ಚುನಾವಣೆಗೆ ಎರಡನೇ ದಿನವೇ ಯೆನ್ನುವಾಗಲೂ ಪ್ರಧಾನ ಮಂತ್ರಿಯವರು ಸಾಲ ಮೇಳ ನಡೆಸುವ ಭರವಸೆ ನೀಡಿದ್ದರು. ಅಂದು ಯಾರೆಲ್ಲರ ಅರ್ಜಿಗಳು ಪರಿಶೀಲನೆಯಲ್ಲಿದ್ದುವೊ ಆ ಎಲ್ಲರಿಗೂ 5000 ರೂ ಗಳ ಸಾಲವನ್ನು ನೀಡುವ, ಈ ಸಾಲಗಳನ್ನು ವಾಪಸು ಮಾಡಲಾದವರಿಗೂ ಮತ್ತೆ ಸಾಲಗಳನ್ನು ನೀಡುವ ಭರವಸೆಗಳನ್ನು ಪೂರೈಸಲು ಒತ್ತಾಯಿಸುವಂತೆ ಎಲ್ಲಾ ಬಡಜನರಿಗೆ ರಾಜ್ಯಸಮಿತಿ ಕರೆ ನೀಡಿತು.

ಲೋಕ ಸಭೆಯಲ್ಲಿ ಮುಂಬರುವ ಬಜೆಟ್ ಜನರ ಮೇಲೆ ಮತ್ತಷ್ಟು ಹೊರಿಸಲಿದೆ.ಹೊರೆಯನ್ನು ಇಂತಹಜನ ವಿರೋಧಿ ನೀತಿಯನ್ನು ಪ್ರತಿಭಟಿಸಲು ರಾಜೀವ್ ಸರ್ಕಾರದ ರಾಜೀನಾಮೆಗಾಗಿ ಒತ್ತಾಯಿಸಲು ಮಾರ್ಚ್ 15ರ ಭಾರತ ಬಂದ್‌ನ್ನು ಯಶಸ್ವಿಗೊಳಿಸಲು ಜನತೆಗೆ ಕರೆ ನೀಡಿತು. ●

ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಹೇಳಿಕೆ

(2ನೇ ಪುಟದಿಂದ)

ಕಾರ್ಮಿಕರ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಹೈದರ್‌ಕೊಟಾಲು ಮತ್ತು ನಿಹಾತ್‌ಸರ್ಜನ್‌ರವರನ್ನು ವಿಮಾನದಿಂದಿಳಿಯುತ್ತಿದ್ದಂತೆಯೇ ಬಂಧಿಸಿ ಸೆರೆಮನೆಗೆತಳ್ಳಿರುವ ಕ್ರಮವನ್ನು ಸಿ.ಪಿ ಐ [ಎಂ] ಸಿ.ಪಿ.ಐ, ಆರ್.ಎಸ್ ಪಿ, ಡಿ.ವೈ.ಎಫ್.ಐ, ಎಸ್.ಎಫ್.ಐ. ಹಾಗೂ ಇತರೇ ಸಂಘಟನೆಗಳು ಜಂಟಿಗೊತ್ತುವಳಿಯ ಮೂಲಕ ತೀವ್ರವಾಗಿ ಖಂಡಿಸಿವೆ ಹಾಗೂ ಕೂಡಲೇಅವರನ್ನು ಬಿಡುಗಡೆಗೊಳಿಸುವಂತೆ ಒತ್ತಾಯಿಸಿವೆ.

ವಿಜಯ ಕುಮಾರಾಣತುಂಗ ಕೊಲೆ

ಶ್ರೀಲಂಕಾ ಮಹಾಜನ ಪಕ್ಷದ ಓರ್ವ ಪ್ರಮುಖ ಮುಂದಾಳು ಹಾಗೂ ಇತ್ತೀಚೆಗೆ ರಚಿತವಾದ ಎಡ ಪಕ್ಷಗಳ ಐಕ್ಯರಂಗದ ಸ್ಥಾಪಕರೂ ಭಾರತ ಶ್ರೀಲಂಕಾ ಒಪ್ಪಂದದ ಬೆಂಬಲಿಗರೂ ಹಾಗೂ ಸಿಂಹಳೀಯರು ತಮಿಳರ ನಡುವಿನ ಜನಾಂಗೀಯ ಐಕ್ಯತೆಯ ಪ್ರತಿಪಾದಕರೂ ಆಗಿದ್ದ ವಿಜಯಕುಮಾರಾಣತುಂಗರ ಕೊಲೆಯನ್ನು ಸಿ.ಪಿ.ಐ. (ಎಂ) ಪಾಲಿಟ್‌ಬ್ಯೂರೋ ಉಗ್ರವಾಗಿ ಖಂಡಿಸಿ ತನ್ನ ಸಂತಾಪವನ್ನು ವ್ಯಕ್ತಪಡಿಸಿದೆ.

ಕಾ||ಕುಮಾರಾಣತುಂಗರಕೊಲೆಯ ಹಿಂದೆ ಶ್ರೀಲಂಕಾ ಭಾರತ ಒಪ್ಪಂದವನ್ನು ಮುರಿಯುವ ಹಾಗೂ 4 ಎಡ ಪಕ್ಷಗಳ ನೇತೃತ್ವದಲ್ಲಿ ಶ್ರೀಲಂಕಾದಲ್ಲಿ ರೂಪುಗೊಂಡಿರುವ ಸಮಾಜವಾದಿ ಐಕ್ಯರಂಗದ ಮೇಲೆ ಪ್ರಹಾರ ಹಾಕುವ ಉದ್ದೇಶವಡಗಿನೆಯೆಂದು ಪಿ ಬಿ. ಅಭಿಪ್ರಾಯಪಟ್ಟಿದೆ. ಹುತಾತ್ಮನಾದ ಮುಖಂಡನ ಅಂತಿಮಯಾತ್ರೆಯಲ್ಲಿ ಲಕ್ಷಾಂತರ ಶ್ರೀಲಂಕಾ ಜನತೆ ಭಾಗವಹಿಸಿ ತಮ್ಮ ಬಾಷ್ಪಾಂಜಲಿಯನ್ನು ಸಲ್ಲಿಸಿದರು. ಸಿ.ಪಿ ಐ.(ಎಂ) ಪಿ.ಬಿ. ಸದಸ್ಯ ಹರಕಿಶನ್‌ಸಿಂಗ್‌ಸುರ್ಜಿತ್‌ಇದರಲ್ಲಿ ಪಾಲ್ಗೊಂಡಿದ್ದರು.

(4ನೇ ಪುಟ ದಿಂದ)

ನಡೆಸಿದರು ಸಿ.ಪಿ.ಐ.(ಎಂ)ಎಂ.ಎಲ್.ಎ.ಗಳ ಮೇಲೆ ಸುಳ್ಳುಪಿತೂರಿ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ" ಎಂದು ನಿಯೋಗ ವರದಿ ಮಾಡಿದೆ.

ಅಗರ್ತಲಾದಲ್ಲಿ ಕಾಂಗ್ರೆಗಳ ಹಲ್ಲೆಗೊಳಗಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟವರನ್ನು ಕಾಣಲು ಎಡಎಂ.ಪಿ.ಗಳ ಈ ನಿಯೋಗಕ್ಕೆ ಅವಕಾಶ ನೀಡಲಿಲ್ಲ. ತ್ರಿಪುರಾದ ರಾಜ್ಯಪಾಲರನ್ನು ಭೇಟಿಯಾಗಿ ರಾಜ್ಯದಲ್ಲಿನ ಪರಿಸ್ಥಿತಿಯನ್ನು ವಿವರಿಸಬೇಕೆಂದಿದ್ದಾಗ ರಾಜ್ಯಪಾಲರು ಅಗರ್ತಲಾದಲ್ಲಿಲ್ಲ ಎಂದು ತಿಳಿಸಲಾಯಿತು. ಆದ್ದರಿಂದ ರಾಷ್ಟ್ರಪತಿಯನ್ನು ಭೇಟಿಯಾಗಿ ಮನವಿಪತ್ರ ಸಲ್ಲಿಸುವುದಾಗಿ ನಿಯೋಗ ತಿಳಿಸಿದೆ. ಬಜೆಟ್ ಅಧಿವೇಶನದ ಸಮಯದಲ್ಲಿ ಸಂಸತ್ತಿನಲ್ಲಿಯೂ ಈ ಪ್ರಶ್ನೆಗಳನ್ನು ಎತ್ತುವುದಾಗಿಯೂ ಅವರು ತಿಳಿಸಿದ್ದಾರೆ.

ರೈತ ಸಂಘದ ಬಹಿರಂಗ ಸಭೆ

ಸಂಡೂರ ತಾಲೋಕಿನ ಸುಲ್ತಾನ್ ಪುರದಲ್ಲಿ ಫೆ. 18ರಂದು ಕರ್ನಾಟಕ ಪ್ರಾಂತ ರೈತ ಸಂಘದ ಸಭೆಯನ್ನು ಏರ್ಪಡಿಸಲಾಗಿತ್ತು. ಹೆಚ್. ಆರ್. ಗೋವಿಂದರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯನ್ನುದ್ದೇಶಿಸಿ ಜಿಲ್ಲಾ ಖಜಾಂಚಿ ಎನ್. ಶಂಕರಣ್ಣ, ತಾಲ್ಲೋಕು ಸಹ ಸಂಚಾಲಕ ಎ. ತಿಮ್ಮಪ್ಪ ಮಂಡಲ ಸದಸ್ಯರಾದ ಹೊನ್ನುರಪ್ಪ ಮಾತನಾಡಿದರು. 'ಭಾರತ್ ಬಂದ್'ನಲ್ಲಿ ರೈತರು ಭಾಗವಹಿಸಿ ಯಶಸ್ವಿಗೊಳಿಸಲು ಕರೆನೀಡಿದರು.

ಫೆ. 19ರಂದು ಎಸ್. ಬಗಾಪುರದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಜಿಲ್ಲಾ ಸಹಕಾರ್ಯದರ್ಶಿ ಕಾ|| ಯು. ಬಸವರಾಜು, ಸಂಚಾಲಕ ಎನ್. ಶಂಕರಣ್ಣ, ತಿಮ್ಮಣ್ಣ, ತಿಮ್ಮಪ್ಪ ಮಂಡಲ ಸದಸ್ಯದುರುಗಯ್ಯ ಮಾತನಾಡಿದರು.

ಮಾರ್ಚ್, 15 ಭಾರತ ಬಂದ್‌ಗೆ ಮುನ್ನಡೆಯಿರಿ

ದೇಶದ ಎಲ್ಲಾ ವಿರೋಧ ಪಕ್ಷಗಳು ರಾಜೀವ್ ಗಾಂಧಿ ರಾಜಿನಾಮೆಯ ಬೇಡಿಕೆಯನ್ನು ಒತ್ತಾಯಿಸುತ್ತಾ ಮತ್ತೊಮ್ಮೆ ಜನರಿಂದ ತೀರ್ಪು ಪಡೆಯಲು ಆಗ್ರಹಿಸುತ್ತಿವೆ. ದೇಶದ ಉದ್ದಗಲಕ್ಕೂ ಈ ಬೇಡಿಕೆಗೆ ಅಭೂತಪೂರ್ವ ರೀತಿಯಲ್ಲಿ ಜನಬೆಂಬಲ ಮೂಡಿ ಬಂದಿದೆ. ತುಳಿಯಲ್ಪಟ್ಟ ಜನಾಂಗವೇ ಬಹು ಸಂಖ್ಯೆಯಲ್ಲಿ ಭಾಗವಹಿಸಿದ್ದ ಎಡ ಪಕ್ಷಗಳು ಸಂಘಟಿಸಿದ್ದ ಡಿಸೆಂಬರ್ 9ರ ಮೆರವಣಿಗೆಯಲ್ಲಿ ಒಂದು ಮಿಲಿಯಕ್ಕೂ ಹೆಚ್ಚು ಜನ ಭಾಗಿಗಳಾಗಿದ್ದು- ದೇಶದಲ್ಲಿ ಗಾಳಿ ಯಾವ ಕಡೆಗೆ ಬೀಸುತ್ತಿದೆ ಎನ್ನುವುದರ ಸ್ಪಷ್ಟ ಸೂಚಕವಾಗಿದೆ.

ದೇಶವೇ ಕಂಡ ಅತ್ಯಂತ ದೊಡ್ಡ ಮತ ಪ್ರದರ್ಶನ ಇದಾಗಿದ್ದು ಸರಕಾರ, ಪತ್ರಿಕೆ, ಎಲ್ಲಾ ರಾಜಕೀಯ ಪಕ್ಷಗಳು ಪ್ರಸ್ತುತ ಸಂದರ್ಭದಲ್ಲಿ ಈ ರ್‍ಯಾಲಿಯ ಪ್ರಾಮುಖ್ಯತೆ ಅರಿಯುವಂತಾಯಿತು. ಈ ರ್‍ಯಾಲಿಯು ಎಡ ಪಕ್ಷಗಳ ಮಹತ್ವದ ಸಾಧನೆಯಾಗಿದ್ದು, ಇದರ ಪರಿಣಾಮವಾಗಿ ಇತರೇ ಜಾತ್ಯಾತೀತ ಪಕ್ಷಗಳೊಂದಿಗೆ ಜನರ ಪ್ರಶ್ನೆಗಳ ಪರಿಹಾರಕ್ಕಾಗಿ, ರಾಷ್ಟ್ರೀಯ ಐಕ್ಯತೆ ಕಾಪಾಡುವುದಕ್ಕಾಗಿ ಹಾಗೂ ರಾಜೀವ್ ಗಾಂಧಿಯನ್ನು ಅಧಿಕಾರದಿಂದ ಕೆಳಗಿಳಿಸುವುದಕ್ಕಾಗಿ ಐಕ್ಯತೆ ಸಾಧಿಸಲು ಸಾಧ್ಯವಾಗಿದೆ.

ಇದರ ಮುಂದುವರಿಕೆಯಾಗಿ ಜನವರಿ 21ರಂದು ಸೇರಿದಎಡ ಮತ್ತು ಜಾತ್ಯಾತೀತ ವಿರೋಧ ಪಕ್ಷಗಳ ಸಭೆ ಫೆಬ್ರವರಿ 23ನ್ನು ಭಾರತ್ ಬಚಾವೋ ದಿನವನ್ನಾಗಿಯೂ, ಮಾರ್ಚ್ 15 ಭಾರತ್ ಬಂದ್ ಆಚರಿಸಲೂ ನಿರ್ಧರಿಸಲಾಯಿತು.

ಮಾರ್ಚ್ 15, ರಾಷ್ಟ್ರವ್ಯಾಪಿ ಯಶಸ್ವಿ ಬಂದ್ ಕಾರ್ಯಕ್ರಮವು ರೂಪಿಸಿ ರಾಜೀವ್ ಗಾಂಧಿ ಸರ್ಕಾರದಿಂದ ವಿಮೋಚನೆ ಪಡೆಯುವ ದಿನವನ್ನಾಗಿ ಆಚರಿಸಬೇಕು. ಆ ದಿನ ಎಲ್ಲಾ ಕೈಗಾರಿಕಾ ಘಟಕಗಳಲ್ಲೂ ಮುಷ್ಕರ ನಡೆಸಬೇಕು. ಶಿಕ್ಷಣ ಸಂಸ್ಥೆಗಳು ಮುಚ್ಚಲ್ಪಡಬೇಕು. ಹೊಲ ಗದ್ದೆಗಳ ಕೆಲಸ ನಿಲುಗಡೆಯಾಗಬೇಕು. ಅಗತ್ಯ ಸೇವೆಗಳನ್ನು ಹೊರತು ಪಡಿಸಿ ಎಲ್ಲಾ ಚಟುವಟಿಕೆಗಳು ಪೂರ್ಣವಾಗಿ ತಡೆಹಿಡಿಯಲ್ಪಡಬೇಕು.

ರಾಜೀವ್‌ಗಾಂಧಿ ಆಡಳಿತ ಕಳೆದ 3 ವರ್ಷಗಳಲ್ಲಿ ದೇಶವನ್ನು ಯಾವ ಮಟ್ಟಕ್ಕೆ ಕೊಂಡೊಯ್ದಿದೆ ಎನ್ನುವ ವಿಚಾರ ಎಲ್ಲರಿಗೂ ತಿಳಿದಿದ್ದೆ ಆಗಿದೆ. ರಾಷ್ಟ್ರೀಯ ಐಕ್ಯತೆ, ಬಡತನ ಮತ್ತು ನಿರುದ್ಯೋಗದ ಹೋಗಲಾಡಿಸುವಿಕೆಯ ಘೋಷಣೆಯೊಂದಿಗೆ 1984ರಲ್ಲಿ ರಾಜೀವ್‌ಗಾಂಧಿ ಅಧಿಕಾರಕ್ಕೆ ಬಂದರು. ಶ್ರೀಮತಿ ಇಂದಿರಾ ಗಾಂಧಿಯವರ ಕೊಲೆಯ ಪರಿಣಾಮವಾಗಿ ಉಂಟಾದ ರಾಜಕೀಯ ಪರಿಸ್ಥಿತಿಯ ಪರಿಣಾಮದಿಂದಾಗಿ ರಾಜೀವ್ ಗಾಂಧಿ ದೊಡ್ಡ ರೀತಿಯ ಬೆಂಬಲವನ್ನು ಚುನಾವಣೆಯಲ್ಲಿ ಪಡೆಯಲು ಸಾಧ್ಯವಾಯಿತು. ಆದರೆ ಇವರ 3 ವರ್ಷಗಳ ಆಡಳಿತ ಪೂರ್ಣವಾಗಿ ವಿಫಲವಾಗಿರುವುದು ಮಾತ್ರವಲ್ಲ ಪರಿಸ್ಥಿತಿ ಇನ್ನಷ್ಟು ಅದೋಗತಿಗೆ ಇಳಿಯಲ್ಪಟ್ಟಿದೆ.

ಆರ್ಥಿಕ ಪರಿಸ್ಥಿತಿ

ಭಾರತವು ಬಂಡವಾಳಶಾಹಿ ಅರ್ಥಿಕ ಪಥವನ್ನಿದಿಡಿದ್ದು ಸಾಮ್ರಾಜ್ಯಶಾಹಿಗಳೊಂದಿಗಿನ ಸಹಕಾರ, ಭೂಮಾಲಿಕರೊಂದಿಗಿನ ಸಖ್ಯತೆ ಮುಂದುವರಿದಿದೆ. ಒಟ್ಟಾರೆ ದೇಶದ ಸಾಧನೆಯ ಆಯವ್ಯಯ ಪಟ್ಟಿಯು ಸ್ಫೂರ್ತಿಯುತವಾಗಿಲ್ಲ. ಅತ್ಯಂತ ಬಹುರಾಷ್ಟ್ರಗಳಲ್ಲಿ ಕೆಳಗಿನಿಂದ 15ನೇ ಸ್ಥಾನದಲ್ಲಿ ನಮ್ಮ ದೇಶವಿದೆ. ಕಳೆದ 40 ವರ್ಷಗಳ ಕಾಂಗ್ರೆಸ್ ಸರ್ಕಾರದ ಒಟ್ಟು ನೀತಿಯ ಫಲ ಇದಾಗಿದೆ. "ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ 21ನೇ ಶತಮಾನಕ್ಕೆ ಪ್ರವೇಶ" ಎನ್ನುವ ಘೋಷಣೆಯಲ್ಲಿ ಈಗ ಬಹುರಾಷ್ಟ್ರೀಯ ಸಂಸ್ಥೆಗಳನ್ನು ಆಮಂತ್ರಿಸುವ, ಸಾರ್ವಜನಿಕ ಉದ್ಯಮಗಳನ್ನು ಕೆಡಹುವ ನೀತಿ ಅನುಸರಿಸಲಾಗುತ್ತಿದೆ.


'ರೋಗ' ಗ್ರಸ್ತ ಘಟಕಗಳ ಹೊರೆ

ಈ ಎಲ್ಲಾ ನೀತಿಗಳ ಒಟ್ಟಾರೆ ಪರಿಣಾಮದಿಂದಾಗಿ 1986 ಜೂನ್ ತಿಂಗಳಲ್ಲಿ 1,30,606 ಇದ್ದರೋಗಗ್ರಸ್ತ ಕೈಗಾರಿಕಾ ಘಟಕಗಳ ಸಂಖ್ಯೆಯು 1987 ಜೂನ್ ತಿಂಗಳ ವೇಳೆಗೆ 1,70,000 ಕ್ಕೆ ಏರಿತು. ಅಂದರೆ ಕೆಲಸದ ದಿನಗಳಲ್ಲಿ 100 ಘಟಕಗಳು ದಿನಂ ಪ್ರತಿ ಮುಚ್ಚಲ್ಪಟ್ಟಿವೆ. ನೊಂದಾಯಿತ ನಿರುದ್ಯೋಗಿಗಳ ಸಂಖ್ಯೆ ಈಗಾಗಲೇ 30.5 ಮಿಲಿಯ ತಲುಪಿದ್ದು ಗ್ರಾಮಾಂತರ ಪ್ರದೇಶದ ನಿರುದ್ಯೋಗವನ್ನು ಸೇರಿಸಿದರೆ ಇದು 90 ಮಿಲಿಯವಾಗುತ್ತದೆ.

ದೇಶದ ಒಟ್ಟಾರೆ ಸಾಲವು ರೂ. 1,90, 981 ಕೋಟಿಗೆ ಏರಲ್ಪಟ್ಟಿದೆ. ಇದರಲ್ಲಿ ರೂ. 1,67,000 ಕೋಟಿ ಆಂತರಿಕ ಸಾಲವಾಗಿದ್ದು, ರೂ. 23,000 ಕೋಟಿ ಹೊರಗಿನ ಸಾಲವಾಗಿದೆ. ವಾರ್ಷಿಕವಾಗಿ ರೂ. 10,650 ಕೋಟಿಯನ್ನು ಸಾಲಕ್ಕೆ ಬಡ್ಡಿಯಾಗಿ ಕೊಡಲಾಗುತ್ತಿದೆ. ಗಮನಿಸಬೇಕಾದ ಇನ್ನೊಂದು ವಿಷಯವೇನೆಂದರೆ-ವಾಣಿಜ್ಯ ಸಾಲ ವಿಪರೀತವಾಗಿ ಹೆಚ್ಚುತ್ತಿದೆ. ಒಟ್ಟು ಸಾಲದ 32.20 ಶೇಕಡವಷ್ಟು ಇದೇ ಆಗಿದೆ. ದೇಶದ ರಫ್ತಿನ ಆದಾಯದ ಶೇಕಡ 26 ರಷ್ಟು ಮೊತ್ತವನ್ನು ಸಾಲದ ಅಸಲು ಮತ್ತು ಬಡ್ಡಿ ಪಾವತಿ ಮಾಡಲು ವ್ಯಯಿಸಬೇಕಾಗಿದೆ. ಪರಿಣಾಮವಾಗಿ ದೇಶದ ಆರ್ಥಿಕತೆ ಹಿಂಜರಿತವಾಗುತ್ತಿದೆ.

ತಾಂತ್ರಿಕತೆಯ ವರ್ಗಾವಣೆಯ ಹೆಸರಿನಲ್ಲಿ ಸರಕಾರವು ಬಹು ರಾಷ್ಟ್ರೀಯರನ್ನು ಆಶ್ರಯಿಸುತ್ತಾ ಹೋಗುತ್ತಿದೆ. 1987ರಲ್ಲಿ ಉನ್ನತ ತಾಂತ್ರಿಕತೆಯ ವರ್ಗಾವಣೆಗಾಗಿ ಒಂದು ಬಿಲಿಯ ರೂಪಾಯಿಗಳ ವೆಚ್ಚದಲ್ಲಿ ಭಾರತ ಮತ್ತು ಅಮೇರಿಕದ ನಡುವೆ 900 ಒಪ್ಪಂದಗಳಾಗಿವೆ.ಯುದ್ಧ ಶಸ್ತ್ರಗಳ ವಿಭಾಗದಲ್ಲಿ ರೂ. 200 ಮಿಲಿಯ ಡಾಲರ್ ಬೆಲೆಯ 784 ಪರವಾನಿಗೆಗಳನ್ನು ವಿತರಿಸಲಾಗಿದೆ.

ಬೆಲೆಯ ಮಟ್ಟಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಸಗಟು ಮಾರಾಟದ ಬೆಲೆ ಸೂಚ್ಯಂಕವು 1987ರ ಕೊನೆಯ ವಾರದಲ್ಲಿ ಅದರ ಹಿಂದಿನ ವರ್ಷಕ್ಕಿಂತ 9.2 ಶೇಕಡದಷ್ಟು ಜಾಸ್ತಿಯಾಗಿತ್ತು.



ಕಾಂ. ಹರಕಿಶನ್‌ಸಿಂಗ್ ಸುರ್ಜಿತ್

ಆಹಾರ ಧಾನ್ಯಗಳ ಬೆಲೆಯಲ್ಲಿ ಶೇಕಡ 16.2ರಷ್ಟು, ಬೇಳೆಕಾಳು 36.5, ಹಾಲಿನ ಉತ್ಪನ್ನಗಳು 15.5, ಸಂಬಾರು ಪದಾರ್ಥಗಳ ಬೆಲೆ 42.5 ಶೇಕಡ ದಷ್ಟು ಏರಿದೆ. ಎಣ್ಣೆ ಧಾರಣೆಯಲ್ಲಿ 19 ಶೇಕಡ ಹೆಚ್ಚುವರಿಯಾಗಿದೆ. ದಿನನಿತ್ಯ ಉಪಯೋಗಿಸುವ ವಸ್ತುಗಳಾದ ಹತ್ತಿ ಬಟ್ಟೆ ಬೆಲೆ 10.6, ಸಾಬೂನು 19.8 ರಷ್ಟು ಏರಿದೆ.

ಹಣದುಬ್ಬರ ಸಾಮಾನ್ಯವಾಗಿದೆ. 1961ರಲ್ಲಿ 98ಪೈಸೆ ಇದ್ದ ರೂಪಾಯಿ ಬೆಲೆ ಈಗ 12 ಪೈಸೆಗೆ ಕುಸಿದಿದೆ. ಪರಿಣಾಮವಾಗಿ ಶೇಕಡ70ಜನ ಸಂಖ್ಯೆ ಬಡತನದ ರೇಖೆಗಿಂತ ಕೆಳಗಿನ ಜೀವನ ನಡೆಸುವಂತಾಗಿದೆ. ಪ್ರತೀರಾತ್ರಿ ಹಸಿದ ಹೊಟ್ಟೆಯೊಂದಿಗೆ ನಿದ್ರಿಸುವವರ ಸಂಖ್ಯೆ 270 ಮಿಲಿಯಕ್ಕೂ ಹೆಚ್ಚಾಗಿದೆ ಎಂದು ಓರ್ವ ಅರ್ಥಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಹಣದುಬ್ಬರದ ಪರಿಣಾಮವಾಗಿ ಬಡವರ ಮೇಲೆಹೊರೆ ಹೇರಲ್ಪಡುತ್ತಿದೆ. ಜಾಗತಿಕ ಬ್ಯಾಂಕ್ ಭಾರತದ ಹಣದ ಮೌಲ್ಯ ಕಡಿತಗೊಳಿಸಲು ಒತ್ತಾಯಿಸುತ್ತಿದೆ. ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ರೂಪಾಯಿ ಬೆಲೆ ತೀರಾ ಕುಸಿದಿದೆ.

ವಲಯವಾರು ಕುಸಿತ

ಕಳೆದ ವರ್ಷಕ್ಕೆ ಹೋಲಿಸಿದಲ್ಲಿ ಕೃಷಿ ಉತ್ಪಾದನೆಯಲ್ಲಿ 15 ಮಿಲಿಯ ಟನ್ನಿನಷ್ಟು ಕಡಿತವಾಗಿದೆ. ಸರಕಾರ ಪ್ರತಿಪಾದಿಸುವ ಹೆಚ್ಚುವರಿ ಬೆಳವಣಿಗೆ ಕೈಗಾರಿಕಾ ಕ್ಷೇತ್ರದಲ್ಲಿ ಕಂಡುಬರುತ್ತಿಲ್ಲ. ಎಲ್ಲಾ ಘಟಕಗಳು ರೋಗಗ್ರಸ್ತ ವಾಗುತ್ತಿವೆ. ರೋಗಗ್ರಸ್ತ ಕೈಗಾರಿಕಾ ಘಟಕಗಳು ಹೊಂದಿರುವ ಬ್ಯಾಂಕಿನ ಸಾಲ ರೂ. 4270.90 ಕೋಟಿಗೆ 1985ರಲ್ಲಿ ಏರಿದೆ. ದೇಶದಲ್ಲಿ ಕೈಗಾರಿಕಾ ತಳಹದಿಯನ್ನು ಸ್ಥಾಪಿಸಲು ನೆರವಾದ ಸಾರ್ವಜನಿಕ ವಲಯವನ್ನು ಖಾಸಗೀ ಕರಣ ಗೊಳಿಸಲು ರಾಜೀವ್ ಗಾಂಧಿ ಸರ್ಕಾರ ಮುಂದಾಗುತ್ತಿದೆ. ಈಗಾಗಲೇ ಎರಡು ತೈಲ ಸಂಸ್ಕರಣ ಘಟಕಗಳನ್ನು ಖಾಸಗೀಯವರಿಗೆ ನೀಡಲಾಗಿದೆ.

ದುಡಿಯುವ ಜನರ ಹಕ್ಕಿನ ಮೇಲೆ ಧಾಳಿ

ಕಾರ್ಮಿಕ ಕಾನೂನುಗಳ ಮೂಲಕ ಕಾರ್ಮಿಕರ ಸಂಘಟನಾ ಹಕ್ಕಿನ ಮೇಲೆ ನಿರಂತರವಾದ ಧಾಳಿ ನಡೆದಿದೆ. ಅಸಂಘಟಿತವಾದ ರೈತ ಸಮುದಾಯಕ್ಕೆ ಬೆಳೆಗೆ ನ್ಯಾಯ ಬೆಲೆ ನೀಡಲಾಗುತ್ತಿಲ್ಲ. ಬಿಕ್ಕಟ್ಟಿನ ಎಲ್ಲಾ ಹೊರೆಯನ್ನು ಇವರ ಮೇಲೆ ಹೊರಿಸಲಾಗುತ್ತಿದೆ. ಶಿಕ್ಷಿತಯುವಕರಿಗೆ ಉದ್ಯೋಗಾವಕಾಶವಿಲ್ಲವಾಗುತ್ತಿದೆ. 40 ವರ್ಷಗಳ ಸ್ವಾತಂತ್ರ್ಯದ ನಂತರವೂ ದೇಶದ ಅಕ್ಷರಸ್ತರ ಸಂಖ್ಯೆ ಕೇವಲ ಶೇ.33.82 ಮಾತ್ರ. ಮಹಿಳೆಯರು ಸಮಾನ ಹಕ್ಕು-ಅವಕಾಶಗಳಿಂದ ವಂಚಿಲ್ಪಟ್ಟಿದ್ದಾರೆ.

'ಸತಿ' ಯಂತಹ ಅಮಾನುಷ ಪದ್ಧತಿಗಳು ಹಿಂದುಳಿದ ಜನವರ್ಗದಿಂದ ಈಗಲೂ ಬೆಂಬಲಿಸಲ್ಪಡುತ್ತಿರುವುದನ್ನು ನಾವು ನೋಡಬಹುದು. ಕೃಷಿ ಕೂಲಿಗಾರರಿಗೆ ಕಾನೂನು ಬದ್ಧ ರಕ್ಷಣೆ ಇಲ್ಲವಾಗಿದೆ. ಇವರ ಮೇಲೆ ಹಾಗೂ ಹರಿಜನ, ಗಿರಿಜನರ ಮೇಲೆ ನಿರಂತರ ಧಾಳಿ ಹೆಚ್ಚಾಗುತ್ತಿದೆ.

ಈ ಎಲ್ಲಾ ಒಟ್ಟಾರೆ ಪರಿಸ್ಥಿತಿಯ ಕಾರಣದಿಂದಾಗಿ ಜನ ವಿಭಾಗದ ಎಲ್ಲರಲ್ಲೂ ಅತೃಪ್ತಿ ಬೆಳೆದು ಬರುತ್ತಿದೆ. ಪ್ರದರ್ಶನ, ಮೆರವಣಿಗೆ, ಮುಷ್ಕರ, ಧರಣಿ, ಘೇರಾವೋ ಮೊದಲಾದ ರೂಪಗಳಲ್ಲಿ ಈ ವಿಭಾಗ ತಮ್ಮ ಅತೃಪ್ತಿಯನ್ನು ಅಭಿವ್ಯಕ್ತ ಪಡಿಸುತ್ತದೆ.

ಈ ಅತೃಪ್ತ ಜನರನ್ನು ಪರಿಸರವನ್ನು ದುರುಪಯೋಗ ಪಡಿಸಿಕೊಂಡು ಸಾಮ್ರಾಜ್ಯಶಾಹಿಗಳ ಏಜಂಟರಾದ ಪ್ರತ್ಯೇಕತಾವಾದಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳು ಕೆಲಸ ನಿರ್ವಹಿಸುತ್ತಿವೆ. ಪ್ರತ್ಯೇಕತಾವಾದಿ ಚಳುವಳಿ ಘೋಷಣೆಗಳನ್ನು ಹುಟ್ಟಿ ಹಾಕಿಸಿವೆ, ವಿಶ್ವ ಹಿಂದೂ ಪರಿಷತ್, ಶಿವಸೇನೆ, ಜಮಾತೆ ಇಸ್ಲಾಮಿ, ಸಿಖ್ ಉಗ್ರಗಾಮಿಗಳು ಧರ್ಮದ ಮುಖವಾಡದಲ್ಲಿ ಕೋಮುವಾದವನ್ನು ಬೆಳೆಯಗೊಟ್ಟು ದೇಶದ ಐಕ್ಯತೆಗೆ ಮುಳುವಾಗಿವೆ. ಈ ಎಲ್ಲಾ ಶಕ್ತಿಗಳನ್ನು ಜನರಿಂದ ಪ್ರತ್ಯೇಕಿಸುವ ಬದಲು ಇವುಗಳೊಂದಿಗೆ ರಾಜಿ ಮಾಡಿಕೊಳ್ಳುವ ನೀತಿಯನ್ನು ಕೇಂದ್ರ ಸರಕಾರ ಅನುಸರಿಸುತ್ತಿದೆ. ಪಂಜಾಬಿನಹಾಗೂ ಜಮ್ಮು-ಕಾಶ್ಮೀರದ ಇಂದಿನ ಸ್ಥಿತಿಗೆ ಕಾಂಗ್ರೆ ಸರ್ಕಾರವೇ ನೇರ ಕಾರಣವಾಗಿದೆ. ಎಡರಂಗವನ್ನು ಹೇಗಾದರೂ ಸೋಲಿಸಬೇಕೆಂದು ಟಿ. ಯು. ಜೆ. ಎಸ್. ನೊಂದಿಗೆ ತ್ರಿಪುರದಲ್ಲಿ ಕಾಂಗ್ರೆಸ್ ಬಹಿರಂಗ ಒಪ್ಪಂದ ಮಾಡಿಕೊಂಡಿತು. ಹಿಂದು-ಮುಸ್ಲಿಂ ಮೂಲಭೂತವಾದಿಗಳೊಂದಿಗೆಸಖ್ಯತೆ ಮಾಡಿಕೊಳ್ಳಲಾಗಿದೆ ಶಾಹಾ ಬಾನು ಮೊಕದ್ದಮೆ ಇಲ್ಲವೇ ರಾಮಜನ್ಮ ಭೂಮಿ ಬಾಬ್ರಿಮಸೀದಿ ಪ್ರಶ್ನೆಗಳಲ್ಲಿ ಇದು ಸ್ಪಷ್ಟವಾಗಿದೆ. ಎಲ್. ಡಿ. ಎಫ್.ನ್ನು ಎದುರಿಸಲು ಕಾಂಗ್ರೆಸ್ ಇತ್ತೀಚೆಗೆ ಕೇರಳದಲ್ಲಿ ಮುಸ್ಲಿಂಲೀಗ್-ಬಿ. ಜೆ. ಪಿ.ಯೊಂದಿಗೆ ಕೈ ಜೋಡಿಸಿತು.

ದೇಶದ ಐಕ್ಯತೆಯ ಪ್ರಶ್ನೆ ಕಾಂಗ್ರೆಸ್ (ಐ) ಪಕ್ಷಕ್ಕೆ ಯಾವತ್ತೂ ಎರಡನೆಯ ವಿಚಾರ. ಇದರ ಮೊದಲ ಆದ್ಯತೆ ಹೇಗಾದರೂ ಮಾಡಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದು ಮತ್ತು ಅಧಿಕಾರಕ್ಕೆ ಬರುವುದೇ ಆಗಿದೆ.

"ಜಾತ್ಯಾತೀತತೆಯು" ನಿಜವಾದ ಅರ್ಥದಲ್ಲಿ ರಾಜೀವ್‌ಗಾಂಧಿಗೆ ನಂಬಿಕೆ ಇಲ್ಲ. ಇದನ್ನು ಪಾಶ್ಚಿಮಾತ್ಯ ಮಾದರಿ ಎಂದು ಈತ ಜರೆಯುತ್ತಾರೆ. ಈ ವ್ಯಕ್ತಿಯಿಂದ ದೇಶದ ಸಮಗ್ರತೆ-ಐಕ್ಯತೆ ರಕ್ಷಣೆ ಖಂಡಿತಾ ನಿರೀಕ್ಷಿಸಲು ಸಾಧ್ಯವಿಲ್ಲ. ಪರಿಣಾಮವಾಗಿ ಮೂಲಭೂತವಾದಿಗಳು ಕೊಬ್ಬಿದ್ದಾರೆ. ಬರಹಗಾರರು ಮತ್ತು ನಿರ್ದೇಶಕರ ಮುಕ್ತ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಒಡ್ಡುವ ರೀತಿಯಲ್ಲಿ ಇತ್ತೀಚೆಗೆ ಬಿ. ಜೆ. ಪಿ. "ತಮಸ್" ದೂರದರ್ಶನದಲ್ಲಿ ಪ್ರಸಾರವಾಗುವುದರ ಮೇಲೆ ದಾಳಿ ಮಾಡಿತು. ಡಾ॥ ಅಂಬೇಡ್ಕರ್ ವಿರಚಿತ "ರಿಡಲ್ಸ್ ಆಫ್ ಹಿಂದುಇಸಂ" ಪುಸ್ತಕದ ಪ್ರಕಟಣೆ ವಿರುದ್ಧ ಬಲ ಪಂಥೀಯ ಶಿವಸೇನೆ ಪ್ರತಿಭಟಿಸಿದ್ದನ್ನೂ ನಾವುಇಲ್ಲಿ ಗಮನಿಸಬಹುದು.

ಸರ್ವಾಧಿಕಾರಿ ಅಪಾಯ

ಪ್ರಜಾಪ್ರಭುತ್ವವಾದಿ ಸಿದ್ಧಾಂತದ ಮೇಲೆ ರಾಜೀವ್‌ಗಾಂಧಿಗಿರುವ ನಿಲುವೆ ಅಪಾಯ ಕಾರಿಯಾಗಿಕಾಣುತ್ತಿದೆ. ಭಾಷಾವಾರು ರಾಜ್ಯಗಳ ಇರುವಿಕೆ ಬಗ್ಗೆ ಈತ ಇತ್ತೀಚೆಗೆ ಬಹಿರಂಗ ವಿರೋಧ ವ್ಯಕ್ತಪಡಿಸಿದ್ದಾರೆ. ರಾಜ್ಯ-ಕೇಂದ್ರ ಸಂಬಂಧ ಬದಲಾಗಬೇಕೆನ್ನುವ ಬೇಡಿಕೆ ದೇಶದ ಉದ್ದಗಲಕ್ಕೂ ಕೇಳಿ ಬರುತ್ತಿದ್ದರೂ, ರಾಜೀವ್ ಗಾಂಧಿ ಕೇಂದ್ರದಲ್ಲಿ ಹೆಚ್ಚಿನ ಅಧಿಕಾರದ ಕೇಂದ್ರೀಕರಣವನ್ನು ಪ್ರತಿಪಾದಿಸುತ್ತಿರುವುದನ್ನು ನಾವು ಕಾಣಬಹುದು. ಆತನ ದೃಷ್ಟಿಯಲ್ಲಿ "ರಾಷ್ಟ್ರವಿರೋಧಿ"

(6 ನೇ ಪುಟನೋಡಿ)

KRNW/BGS -312 MAG (2) PRB DECR 319/ - 78-76

(1 ನೇ ಪುಟದಿಂದ)

ಮಾತ್ರಕ್ಕೂ ಬಜೆಟ್‌ನ ಕೊರತೆಯನ್ನು ರೂ. 5,688 ಕೋಟಿಗಿಂತ ಅಧಿಕವಾಗಲೂ ಬಿಡುವುದಿಲ್ಲವೆಂದು ಹೇಳಿ ಇದೀಗ ರೂ. 7,484 ಕೋಟಿ ಕೊರತೆಯ ಬಜೆಟ್‌ನ್ನು ಶ್ರೀಮಾನ್ ತಿವಾರಿಯ ಮೂಲಕ ಜನತೆಯ ಮೇಲೆ ಹೇರುವುದು 'ಕಪಟ' ವಲ್ಲದೆ ಬೇರೆನು. ?

ಆಡಳಿತ ದರಗಳನ್ನು ರೈಲ್ವೆ-ಪೋಸ್ಟಲ್ ದರಗಳನ್ನು ಇದೀಗ ರೂ. 615 ಕೋಟಿ ತೆರಿಗೆಗಳನ್ನು ಹಾಕಿ ಸುಮಾರು ರೂ. 4685 ಕೋಟಿ ಆದಾಯವನ್ನು ಬಗಲಿಗೆ ಹಾಕಿದ ಕೇಂದ್ರ ಸರ್ಕಾರವು (ಅದರಲ್ಲೂ ಬರಗಾಲದ ಸರ್ ಚಾರ್ಜ್ ಮೂಲಕ ಸಂಗ್ರಹವಾದ ಹಣವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ) ಈ ಹಣದಲ್ಲಿ ದೇಶದ ಎಲ್ಲಾ 22ರಾಜ್ಯಗಳಿಗೆ 'ರಾಜ್ಯಗಳ ಕರಗಳ ಪಾಲು' ಎಂದು ಕೇವಲ ರೂ. 28 ಕೋಟಿ ಮಾತ್ರ ಕೊಡುವುದೆಂದರೆ, ಇದು ಶುದ್ಧ ಕಪಟ ಬಜೆಟ್ ಅಲ್ಲವೆ ?

ಅಪ್ರತ್ಯಕ್ಷ ತೆರಿಗೆಗಳನ್ನು ಏರಿಸುತ್ತಾ ಬಂದು ರೂಪಾಯಿ ಬೆಲೆ ಇಳಿಸುತ್ತಾ ಹೋಗಿ ಜನತೆಯ ಜೀವನಾವಶ್ಯಕ ವಸ್ತುಗಳ ಬೆಲೆಗಳನ್ನು ವಿಪರೀತ ಏರಿಸುತ್ತಾ ಹೋಗಿ ಇದೀಗ "ಭಾರತದ ಅತಿ ಪ್ರಸರಣವು (INFLATION) ಎರಡು ಅಂಕೆಗಳನ್ನು ದಾಟುತ್ತಿರುವಾಗ ಸರಕಾರವೇ ಬಡಬಡಿಸುತ್ತಿದ್ದ ಬಡತನ ವಿರೋಧಿ (?) ಐ.ಆರ್.ಡಿ.ಪಿ, ಎನ್.ಆರ್.ಐ.ಪಿ, ಆರ್.ಎಲ್.ಇ.ಜಿ.ಪಿ. ಇತ್ಯಾದಿ ಸ್ಕೀಮುಗಳಿಗೆ ಹಿಂದಿನ ವರ್ಷದಿಂದ ಈ ವರ್ಷ ಕೇವಲ ರೂ.150 ಕೋಟಿಯಷ್ಟು ಮಾತ್ರ ಹೆಚ್ಚಿಸಿದುದು, ಕಪಟ ಅಲ್ಲದೆ ಮತ್ತೇನು ?

ದೇಶವ್ಯಾಪಿ ಬರಗಾಲ ತಾಂಡವವಾಡುತ್ತಿರುವ ಪರಿಣಾಮವಾಗಿ ದೇಶದ ರೈತರ ಕೈಯಲ್ಲಿ ಏನೂ ಕಾಸು ಓಡಾಡದಿರುವಾಗ ಅವರ ಬೆಳೆಗಳಿಗೆ ನ್ಯಾಯವಾದ ಬೆಲೆಗಳನ್ನು ಒದಗಿಸುವ ದೃಢವಾದ ನೀತಿ ಅನುಸರಿಸುವ ಬದಲು ಅವರಿಗೆ ಅಲ್ಲಲ್ಲಿ ಇಷ್ಟಿಷ್ಟು ಸವಲತ್ತುಗಳನ್ನು ಪರಿಹಾರಗಳನ್ನು ಮತ್ತು ರಿಯಾಯಿತಿಗಳನ್ನು ಒದಗಿಸಿ "ಈ ಬಜೆಟ್ ಭಾರತದ ಗ್ರಾಮಾಂತರದ ಬಜೆಟ್" ಎಂದು ತಾನೇ ಬಡಾಯಿ ಕೊಚ್ಚಿ ತಮ್ಮ ಪಕ್ಷದ ಹೊಗಳು ಭಟ್ಟರ ಮೂಲಕ ಹೊಗಳಿಸಿ ಕೊಂಡದು ಕಪಟವಲ್ಲದೆ ಬೇರೆನು ?

ಬಜೆಟ್ ಪೂರ್ವದಲ್ಲಿ ಪಾರ್ಲಿಮೆಂಟಿನಲ್ಲಿ ಮಂಡಿಸಲಾದ "ಆರ್ಥಿಕ ಸಮೀಕ್ಷೆ" (1987-88) ರಪ್ರಕಾರ ಮುಂಬರುವ ಬಜೆಜ್

ಈ ಮೂರು ಶಾಶ್ವತ ಪರಿಹಾರಗಳನ್ನು ಕಂಡು ಕೊಳ್ಳಬೇಕಾಗಿದೆ ಎಂದು ಸಾರಿತ್ತು: ಒಂದು ಆದಾಯದ ಮೇಲೆ ಕಡಿವಾಣ; ಎರಡು ಆದಾಯದ ತಳಹದಿಯನ್ನು ವಿಸ್ತರಿಸುವುದು ; ಮೂರು, ಸಾರ್ವಜನಿಕ ಕ್ಷೇತ್ರದ ಆರ್ಥಿಕ ಸಾಮರ್ಥ್ಯವನ್ನು ವೃದ್ಧಿಸುವುದು.

ಈ ಮೂರು ಶಾಶ್ವತ ಪರಿಹಾರಗಳನ್ನು ಗಂಭೀರವಾಗಿ ಪೂರೈಸುವ ದಿಕ್ಕಿನಲ್ಲಿ ದೇಶದ ದುಃಸ್ಥಿತಿಯಲ್ಲಿರುವ ಆರ್ಥಿಕವನ್ನು ಸ್ಥಿಮಿತಕ್ಕೆ ತರಲು ದಿಟ್ಟ ಹೆಜ್ಜೆಗಳನ್ನು ಇಡುವ ಬದಲು ಶ್ರೀಮಾನ್ ತಿವಾರಿಯವರ ಬಜೆಟ್ "ಅಗ್ಗದ ಜನ ಪ್ರಿಯತೆ ಯನ್ನು ಗಳಿಸುವ "ಚುನಾವಣೆ ನಾಳೆ ಇದೊ ಬರುತ್ತಿದೆ ಎಂಬುದನ್ನು ಸೂಚಿಸುವ ಕಪಟ ಬಜೆಟ್ ಆಗಿದೆ. ಎನ್ನುವುದರಲ್ಲಿ ಏನೂ ಸಂಶಯವಿಲ್ಲ.

ಆದರಲ್ಲೂ ಬಜೆಟ್ ನಲ್ಲಿ ಮಾಡಲಾದ ವಿತರಣಾ ವ್ಯತ್ಯಾಸಗಳು ತುರ್ತಿನ ಸ್ವಭಾವದ್ದಾಗಿವೆ. ವಿನಹ ಯಾರ ದೃಷ್ಟಿ ವುಳ್ಳದ್ದಾಗಿಲ್ಲ, ಪರಿಣಾಮವಾಗಿ, ಏಳನೇ ಪಂಚವಾರ್ಷಿಕ ಯೋಜನೆಯ ಗತಿ ಯೇನಾಗುವುದು ಎಂದು ಯಾರಿಗೂಏನೂ ಹೇಳಲಾರದ ಪರಿಸ್ಥಿತಿ ಇದೆಎಂದರೆ ಬಜೆಟ್"ಕಪಟ" ಅಲ್ಲದೆ ಬೇರೇನು ?

1988-89ರ ಯೋಜನೆಗೆ ಕೇವಲ ಶೇ. 52 ರಷ್ಟು ಮಾತ್ರ ಹಣ ಒದಗಿಸು (ಅದು 7484 ಕೋಟಿಗಿಂತಲೂ ಅಧಿಕ ಕೊರತೆ ಬಜೆಟ್ ಸಮರ್ಪಿಸಿ) ವುದನ್ನು ಕಾಣುವಾಗ, ಉಳಿದ ಹಣ ಯೋಜನೆಗೆ ಎಲ್ಲಿಂದ ಬರುವುದು ಎಂಬುದನ್ನು ಸೂಚಿಸದೆ ಇರುವುದೆಂದರೆ ಬಜೆಟ್ "ಕಪಟ" ಅಲ್ಲದೆ ಮತ್ತೇನು ?

ರಾಜ್ಯ ಸರ್ಕಾರಗಳಿಗೆ ರೂ. 25 ಕೋಟಿಗಿಂತ ಅಧಿಕ ಓ.ಡಿ. ಮಾಡಬಾರದೆಂದೂ, ರಾಜ್ಯ ಸರ್ಕಾರಗಳು "ಮಿತವ್ಯಯ" ಮಾಡಬೇಕೆಂದೂ, "ಆರ್ಥಿಕ ಶಿಸ್ತಿ"ಗೆ ಒಳಗಾಗಿರಬೇಕೆಂದೂ, ಕೇಂದ್ರ ಸರ್ಕಾರವು ಆಗಾಗ್ಗೆ "ಪ್ರಚಾರದಿಂದ ಕೂಡಿದ ಹೇಳಿಕೆ"ಗಳನ್ನು ಕೊಡುತ್ತಿದ್ದರೂ, ಕೇಂದ್ರ ಸರ್ಕಾರ ಮಾತ್ರ ಈ ಯಾವುದೇ ಕ್ರಮವನ್ನು ಸ್ವತಃ ಅನುಸರಿಸುತ್ತಿಲ್ಲ ಎಂಬುದು ಸಮವಿಧಿಕ. ಈ ಬಜೆಟ್ ಅದಕ್ಕೇನೂ ಅಪವಾದವಾಗಿಲ್ಲ !

ಒಟ್ಟಿನಲ್ಲಿ, ಶ್ರೀಮಾನ್ ರಾಜೀವ್ ಗಾಂಧಿ ದೇಶದ ಆರ್ಥಿಕವನ್ನು ಭದ್ರನೆಲೆಯಲ್ಲಿ ಹಾಕುವ ಬದಲು, ದೇಶವನ್ನಿಲ್ಲಿ "ಸಾಲದ ಜಾಲದಲ್ಲಿ ಸಿಲುಕಿ

ಇ. ಎಂ. ಎಸ್. ಕರೆ

ಎ[?]ನು ಪ್ರಶ್ನಿಸಿದರು.

ಇಡೀ ಈಶಾನ್ಯ ಭಾರತದಲ್ಲಿ ಅಸ್ಸಾಂ, ಮಣಿಪುರ, ಮಿಜೋರಾಂ ಮುಂತಾದೆಡೆ ಪ್ರತ್ಯೇಕವಾದಿ ಚಳುವಳಿಗಳು ಪ್ರಬಲವಾಗಿದ್ದರೂ ತ್ರಿಪುರಾದಲ್ಲಿ ಮಾತ್ರ ಬುಡಕಟ್ಟು ಮತ್ತು ಇತರೆ ಜನಾಂಗಗಳ ನಡುವೆ ಸಾಮರಸ್ಯವನ್ನು ಕಾಪಾಡಲು ಎಡರಂಗವು ಶ್ರಮಿಸುತ್ತಾ ಬಂದಿದೆ ಆದರೆ ಇದೀಗಪೂರ್ವ ಯೋಜಿತ ಕೊಲೆಗಳನ್ನು ಸಂಘಟಿಸಿ ಇಡೀ ತ್ರಿಪುರಾ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶವೆಂದು ಘೋಷಿಸಿ ಸೈನ್ಯ ಶಕ್ತಿಯನ್ನು ಬಳಸಿಕೊಂಡು ಕಾಂಗ್ರೆಸ್ (ಐ)- ಟಿ.ಯು.ಜೆ.ಎಸ್. ಮೈತ್ರಿ ಕಳೆದ ಚುನಾವಣೆಯಲ್ಲಿ ಎಡರಂಗ ಸರ್ಕಾರವನ್ನು ಪದಚ್ಯುತಿಗೊಳಿಸಿದೆ.

ಜಾತಿವಾದೀ ಮತ್ತು ಕೋಮುವಾದಿ ಶಕ್ತಿಗಳೊಂದಿಗೆ ಷಾಮೀಲಾಗುವುದು ಕಾಂಗ್ರೆಸ್‌ನ ಪರಂಪರಾಗತ ಧೋರಣೆಯಾಗಿದೆ. ಕೇರಳದಲ್ಲಿ 1959ರಲ್ಲಿ ಪ್ರಾರಂಭವಾದ ಕಾಂಗ್ರೆಸ್-ಮುಸ್ಲಿಂ ಲೀಗ್ ಮೈತ್ರಿಯು ಇಂದೂ ಸಹ ಮುಂದುವರಿಯುತ್ತಿದೆ. ಕುವೈತಿನ ಇಬ್ಬರು ಅನಪೇಕ್ಷಣೀಯ ವ್ಯಕ್ತಿಗಳಿಗೆ ಸರ್ಕಾರಿ ಆತಿಥ್ಯಇವನ್ನು ನೀಡಿದ ಕರುಣಾಕರನ್‌ಇದೀಗಅವರಿಂದ ವೆಚ್ಚವನ್ನು ಪಡೆಯಲಾಗಿದೆಯೆಂದು ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ರಾಜೀವ್ ಗಾಂಧಿಯವರ ಸರ್ಕಾರದಡಿಯಲ್ಲಿ ರಾಷ್ಟ್ರೀಯ ಐಕ್ಯತೆಗೆ ಸತತವಾಗಿ ಅಪಾಯಕೊಳ್ಳಗಾಗಿದೆ.

1957ರಲ್ಲಿ ಕೇರಳದಲ್ಲಿ ಪ್ರಪ್ರಥಮವಾಗಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ಸೇತರ ಸರ್ಕಾರವನ್ನು ಉರುಳಿಸಲು ಅಂದಿನ ಪ್ರಧಾನಿ ಜವಹರಲಾಲ್ ನೆಹರು ಹಾಗೂ ಕಾಂಗ್ರೆಸ್ ಅಧ್ಯಕ್ಷೆ ಶ್ರೀಮತಿ ಇಂದಿರಾಗಾಂಧಿಯವರು ವಿಮೋಚನಾ ಸಮರವನ್ನು ಹೂಡಿ ಸರ್ಕಾರವನ್ನು ವಜಾಮಾಡಿದರು. ಈಗ ರಾಜೀವ್ ಗಾಂಧಿಯವರು ತಮಗೆ 'ರಾಷ್ಟ್ರವಿರೋಧಿ' ಎಂದು ಕಂಡು ಬಂದ ಯಾವುದೇ ರಾಜ್ಯ ಸರ್ಕಾರವನ್ನು ವಜಾ ಮಾಡುವುದಾಗಿ ಬೆದರಿಕೆಯನ್ನೊಡ್ಡಿದ್ದಾರೆ. ಈಗಿ ಪ್ರಧಾನಿಯ ತಾಯಿಯಿಂದ ನೇಮಕವಾಗಿ ಮಗನಿಗೆ ವರದಿ ಸಲ್ಲಿಸಿದ ಸರ್ಕಾರಿಯಾ ಆಯೋಗ ಈ ಬಗ್ಗೆ ಏನು ಹೇಳಿದೆ ? ಇಲ್ಲಿಯವರೆಗೆ ಸಂವಿಧಾನದ 356ನೇ ನಿಯಮವನ್ನು ಬಳಸಿಕೊಂಡು 76 ರಾಜ್ಯ ಸರ್ಕಾರಗಳನ್ನು ವಜಾ ಮಾಡಲಾಗಿದೆ. ಆದರೆ ಕೇವಲ 26 ಪ್ರಕರಣಗಳು ಮಾತ್ರ ಸಮರ್ಥನೀಯವಾಗಿದೆಯೆಂದುಸರ್ಕಾರಿಯಾಆಯೋಗ ನಿರ್ಧಾರಕ್ಕೆಬಂದಿದೆ.ಇದರಿಂದ ವ್ಯಕ್ತವಾಗುವುದೇನು ಎಂದು ಪ್ರಶ್ನಿಸಿದರು.

ಕೇಂದ್ರ-ರಾಜ್ಯಗಳ ಸಂಬಂಧದ ಕುರಿತ ಇತರೆ ಅನೇಕ ಪ್ರಶ್ನೆಗಳ ಬಗೆ ಸಹ ಆಯೋಗವು ತನ್ನ ಶಿಫಾರಸ್ಸುಗಳನ್ನು ನೀಡಿದೆ ಮತ್ತೊಂದು ಉದಾಹರಣೆಯೆಂದರೆ ರಾಜ್ಯಪಾಲರ ನೇಮಕಾತಿಯ ವಿಷಯದಲ್ಲೂ ಆಯೋಗವು ತನ್ನ ತೀವ್ರ ಅವಸಾಧಾನವನ್ನು ವ್ಯಕ್ತಪಡಿಸಿದೆ ಆದರೂ ಇತ್ತೀಚೆಗೆ ಕೇರಳ ರಾಜ್ಯಪಾಲರನ್ನಾಗಿ ಕೇಂದ್ರ ಸಚಿವೆಯಾಗಿದ್ದ ಮಹಿಳೆಯೊಬ್ಬರನ್ನು ನೇಮಿಸಲಾಗಿದೆ. ಕರ್ನಾಟಕ ಮತ್ತು ಸಕಿರೆ ಕಾಂಗ್ರೆಸ್ಸೇತರ ಸರ್ಕಾರಗಳಿರುವ ರಾಜ್ಯಗಳಿಗೂ ಸಕ್ರಿಯ ಕಾಂಗ್ರೆಸ್ ನಾಯಕರನ್ನೇ ರಾಜ್ಯಪಾಲರನ್ನಾಗಿ ನೇಮಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರಜಾಪ್ರಭುತ್ವದ ಮೇಲಿನ ಧಾಳಿಗಳ ಬಗ್ಗೆ ಸಹ ಜಾಗೃತರಾಗಿರುವಂತೆ ಕಾ|| ಇ. ಎಂ. ಎಸ್. ಎಚ್ಚರಿಕೆನೀಡಿದರು

ಸಿ.ಪಿ.ಐ (ಎಂ) ನಾಯಕರಾದ ಕಾಂ. ಸೂರ್ಯನಾರಾಯಣರಾವ್ 'ಭಾರತ್ ಬಂದ್'ನ 14 ಬೇಡಿಕೆಗಳ ಬಗ್ಗೆ ವಿಶ್ಲೇಷಿಸಿದರು. ಸಿ.ಪಿ ಐ. ಇಂದ್ರಜಿತ್ ಗುಪ್ತಾ ಹಾಗೂರಾಜ್ಯ ಕಾರ್ಯದರ್ಶಿ ಕಾಂ. ಎಂ.ಎಸ್. ಕೃಷ್ಣನ್‌ರವರು ಸಹ ಮಾತಾಡಿ ಬಂದ್ ಯಶಸ್ವಿಗೊಳಿಸಲು ಕರೆ ನೀಡಿದರು. ಪ್ರಾರಂಭದಲ್ಲಿ ಮಾತನಾಡಿದು ನಗರ ಜನತಾ ಪಕ್ಷದ ಅಧ್ಯಕ್ಷರಾದ ಶಾಸಕ ಎಂ.ಎಸ್. ನಾರಾಯಣರಾವ್ ಸ್ವಾಗತಿಸಿ ಸಿ.ಪಿ.ಐ. (ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಎಸ್. ಆರ್-ಆರಾಧ್ಯ ವಂದಿಸಿದರು ಸಿ. ಪಿ. ಐ. (ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ|| ಸಿ. ನಂಜುಂಡಪ್ಪ ಮತ್ತು ಎನ್. ಕೆ. ಉಪಾಧ್ಯಾಯ ಹಾಗೂ ಜನತಾ ಪಕ್ಷದ ಹಿರಿಯ ನಾಯಕರಾದ ಶ್ರೀ ಟಿ. ಆರ್. ಶಾಮಣ್ಣನವರು ವೇದಿಕೆಯ ಮೇಲೆ ಉಪಸ್ಥಿತರಿದರು. ಸಿ. ಪಿ. ಐ.(ಎಂ) ಕಾರ್ಯಕರ್ತರು ಸಿಲ್ವಯಬ ಪಾರ್ಕಿನಿಂದ ಮೆರವಣಿಗೆಯ ಮೂಲಕ ಸಾರ್ವಜನಿಕ ಸಭೆಯ ಸ್ಥಳಕ್ಕೆ ಬಂದರು.

ಮೊದಲನೇ ಕಾಲಂ ನಿಂದ

ಸುತ್ತಿದ್ದಾರೆ.

ದೇಶದ ಒಟ್ಟು ರಫ್ತುಗಳ ಶೇ.23ರಷ್ಟು ಪ್ರಮಾಣ ಇದೀಗ ಬಾಹ್ಯಾ ಕುರಿತು ಮತ್ತು ಬಡ್ಡಿಗಳನ್ನು ಕೊಡಬೇಕಾಗಿದೆ. ಎಂದರೆ ದೇಶದ ಬಡಜನ ಕೋಟಿಯನ್ನು ಮೇಲಕ್ಕೆತ್ತಲು ಎಲ್ಲಿದೆ ಹಣ ?

ಹೀಗಿದ್ದೂ ಈ ಬಡ ಜನಕೋಟಿಯ ಮೇಲೆನೇ ಭಾರ ಬೀಳುವಂತೆ ಕರಧೋರಣೆಯನ್ನು ಕೊರತೆ ಹಣ ಧೋರಣೆಯನ್ನು ಅನುಸರಿಸುತ್ತಿದೆ. ಕೇಂದ್ರ ಸರ್ಕಾರವೆಂದರೆ ಇದು "ಕಪಟ" ಬಜೆಟ್ ಎಂದು ದೃಢವಾಗಿ ಕರೆಯಬಹುದು.

ದೇಶದ ಜನತೆಯನ್ನು ಹೀಗೆ "ಭ್ರಮೆ" ಗೆ ಗುರಿಪಡಿಸಿ ತತ್ತರಿಸುತ್ತಿರುವ ತಮ್ಮ ಆಡಳಿತೆಯನ್ನು ಉಳಿಸುವುದು ಹೇಗೆ ಎಂಬುದಷ್ಟೇ ದೃಷ್ಟಿಯಲ್ಲಿಟ್ಟ ಬಜೆಟ್ ಇದು ಎಂದು ನಿಸ್ಸಂದೇಹವಾಗಿ ಕರೆಯಬಹುದು.

ರಾಜೀವ್ ಗಾಂಧಿಯವರ ರಾಜೀನಾಮೆಗಾಗಿ ಒತ್ತಾಯಿಸಿ

ಮಾರ್ಚ್ 15

ಭಾರತ್ ಬಂದ್ ಯಶಸ್ವಿಗೊಳಿಸಿ

ಎಡ ಹಾಗೊ ಜಾತ್ಯಾತೀತ ಪಕ್ಷಗಳ ಕರೆ

Printed & Published by P. Ramachandra Rao on behalf of the Communist Party of India [Marxist] Karnataka State Committee K. V. Temple Street, Sultanpet, Bangalore-560053 Editorial and Managerial Office : L-56, K. V. Temple Street, Sultepet B-53 Phone · 75331 UMA Printers B-53 Editor : P. Ramachandra RaoM anaging Editor : N. K. Upadhaya